ಶ್ರೀಕುಲಶೇಖರಾಚಾರ್ಯವಿರಚಿತ

# ಮುಕುಂದಮಾಲಾ

(ಭಾವಾರ್ಥದೊಡನೆ)



ಅನುವಾದಕರು

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ - 573211

ದೂರವಾಣಿ : 08175 – 273820

2005

## ಈ ಕಾರ್ಯಾಲಯದಿಂದ ತಾವು ಯಾವ ಯಾವ ಲಾಭವನ್ನು ಪಡೆಯಬಹದು ?

1. ಕಾರ್ಯಾಲಯದಲ್ಲಿ ನಡೆಯುತ್ತಿರುವ ಪೂಜೆ, ಭಜನೆ, ಪುರಾಣ ಶ್ರವಣ, ಉಪನ್ಯಾಸಗಳು, ಅನುಷ್ಠಾನಗಳು, ವೇದಾಂತ ಸಪ್ತಾಹ, ವೇದಾಂತ ಶಿಬಿರ - ಇವುಗಳಲ್ಲಿ ಯಥಾಶಕ್ತಿಯಾಗಿ ಭಾಗವಹಿಸಬಹುದು.

2. ಇಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯ ಗ್ರಂಥಗಳನ್ನು ಕೊಂಡು, ಓದಿ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

3. ಕಾರ್ಯಾಲಯದಿಂದ ಪ್ರಕಟವಾಗುವ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆ ಮತ್ತು ಬೆಂಗಳೂರು ಶಾಖಾ ಕಾರ್ಯಾಲಯದಿಂದ ಹೊರಡುವ ಶಂಕರಭಾಸ್ಕರ ತ್ರೈಮಾಸಿಕ ಪತ್ರಿಕೆಗೆ ಚಂದಾದಾರರಾಗಿ ಬಗೆಬಗೆಯ ಅಧ್ಯಾತ್ಮ ಬೋಧೆಯನ್ನು ಪಡೆಯಬಹುದು. ಚಂದಾದಾರರು ಕೊಂಡುಕೊಳ್ಳುವ ಪುಸ್ತಕಗಳಿಗೆ 12½% ರಿಯಾಯಿತಿ ದೊರಕುವುದು.

4. ಸತತವಾಗಿ ಕಾರ್ಯಾಲಯದಿಂದ ಮುದ್ರಣ / ಮರುಮುದ್ರಣವಾಗುತ್ತಿರುವ ಗ್ರಂಥ ಗಳಿಗೆ ಯಥಾಶಕ್ತಿಯಾಗಿ ಧನಸಹಾಯವನ್ನು ಮಾಡಿ ಅಧ್ಯಾತ್ಮ ಪ್ರೇಮಿಗಳಿಗೆ ಸುಲಭ ದರದಲ್ಲಿ ಪುಸ್ತಕಗಳು ದೊರಕುವಂತೆ ಮಾಡಿ, ಪುಣ್ಯವನ್ನೂ ಕೀರ್ತಿಯನ್ನೂ ಸಂಪಾದಿಸಿ ಕೊಳ್ಳಬಹುದು. ಈ ಪುಸ್ತಕಗಳ ಗ್ರಂಥ ಭಂಡಾರವನ್ನು ಏರ್ಪಡಿಸಿ ಕೊಳ್ಳಬಹುದು.

5. ಕಾರ್ಯಾಲಯದಲ್ಲಿರುವ ವಿದ್ಯಾಲಯಕ್ಕೆ ಯೋಗ್ಯರಾದ ವಿದ್ಯಾರ್ಥಿಗಳನ್ನು ಕಳುಹಿಸಿ ಅಧ್ಯಾತ್ಮವಿದ್ಯೆ (ವೇದಾಂತ)ಯಲ್ಲಿ ಪ್ರವೀಣರನ್ನಾಗಿ ಮಾಡಿಸಿ ಅವರಿಂದ ನಿಮ್ಮ ಪ್ರಾಂತ್ಯದಲ್ಲಿ ಬ್ರಹ್ಮವಿದ್ಯಾ ಪ್ರಚಾರವನ್ನು ಮಾಡಿಸಬಹುದು.

6. ಗುರುಕುಲಪದ್ಧತಿಯಂತೆ ನಡೆಯುತ್ತಿರುವ ವಿದ್ಯಾಲಯದ ವಿದ್ಯಾರ್ಥಿಗಳ ಶಾಶ್ವತ ಭೋಜನವ್ಯವಸ್ಥೆಗೆ 5,000 ರೂ. ಗಳ ಮೂಲಧನ ನೀಡಿ ಬರುವ ಬಡ್ಡಿಯಿಂದ ವರ್ಷದಲ್ಲಿ ಒಂದು ದಿನ ತಮ್ಮ ಅಥವಾ ತಮ್ಮ ಮಾತಾಪಿತೃಗಳ ಹೆಸರಿನಲ್ಲಿ ಹಸ್ತೋದಕ ಸೇವೆಯಲ್ಲಿ ಭಾಗವಹಿಸಿ, ಅನ್ನದಾನ, ವಿದ್ಯಾದಾನದಲ್ಲಿ ಪುಣ್ಯಭಾಗಿಗಳಾಗಬಹುದು.

7. ಗ್ರಂಥಭಂಡಾರ, ಉಚಿತವಾಚನಾಲಯಗಳನ್ನು ಉಪಯೋಗಿಸಿಕೊಂಡು, ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಳ್ಳಬಹುದು.

8. ಕಾರ್ಯಾಲಯದ ಕಟ್ಟಡ, ವಿದ್ಯಾಲಯ, ಪೂಜಾಮಂದಿರ, ಗುರುಮಂದಿರ, ಪುಸ್ತಕ ಭಂಡಾರ, ವಿದ್ಯಾರ್ಥಿಗಳ ಭೋಜನ ವ್ಯವಸ್ಥೆಗಳಿಗೆ ಯಥೋಚಿತವಾಗಿ ಸಹಾಯ ಮಾಡಿ ಪುಣ್ಯವನ್ನು ಗಳಿಸಿಕೊಳ್ಳಬಹುದು.

**80G ರಿಯಾಯಿತಿ ಸೌಲಭ್ಯವನ್ನೂ ಪಡೆಯಬಹುದು.**

ಅಧ್ಯಾತ್ಮಗ್ರಂಥಾವಳಿ.

ಶ್ರೀಕುಲಶೇಖರಾಚಾರ್ಯವಿರಚಿತ

# ಮುಕುಂದಮಾಲಾ

(ಭಾವಾರ್ಥದೊಡನೆ)

ಅನುವಾದಕರು :
ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ. 53

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ - 573 211
ದೂ : 08175-273820
2005

ಮೊದಲನೆಯ ಅಚ್ಚಾದದ್ದು : 1935
ಎರಡನೆಯ ಸಂಸ್ಕರಣ : 1953 - 2000 ಪ್ರತಿಗಳು
ತಿದ್ದಿದ ಮೂರನೆಯ ಸಂಸ್ಕರಣ: 1967 - 2000 ಪ್ರತಿಗಳು
ನಾಲ್ಕನೆಯ ಸಂಸ್ಕರಣ : 1983 - 2000 ಪ್ರತಿಗಳು
ಐದನೆಯ ಸಂಸ್ಕರಣ : 1991 - 2000 ಪ್ರತಿಗಳು
ಆರನೆಯ ಸಂಸ್ಕರಣ : 2005 - 2000 ಪ್ರತಿಗಳು

ಪುಟಗಳು : 4+24

ಬೆಲೆ : 10/- ರೂ.

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
(All Rights Reserved)

ಅಕ್ಷರ ಜೋಡಣೆ :
ಶ್ರೀ ಮಾರುತಿ ಗ್ರಾಫಿಕ್ಸ್
ನಂ. 44, 6ನೇ ಮುಖ್ಯರಸ್ತೆ
3ನೇ ಬ್ಲಾಕ್, ತ್ಯಾಗರಾಜನಗರ
ಬೆಂಗಳೂರು : 560028
ದೂ : 2676 6433

ಮುದ್ರಣಕಾರರು :
ಶ್ರೀ ಗಣೇಶ ಮಾರುತಿ ಪ್ರಿಂಟರ್ಸ್
ನಂ. 76, 3ನೇ ಬ್ಲಾಕ್, 6ನೇ ಮುಖ್ಯರಸ್ತೆ
ತ್ಯಾಗರಾಜನಗರ, ಬೆಂಗಳೂರು - 28
ದೂ : 2676 6342

# ಪೀಠಿಕೆ

ಮೊದಮೊದಲು ಯಾವುದೋ ಒಂದು ಮತದವರಿಗಾಗಿ ಹುಟ್ಟಿದ ಕೆಲವು ಪ್ರಕರಣಗಳು ಹೇಗೋ ಆ ಎಲ್ಲೆಕಟ್ಟನ್ನು ಮೀರಿ ಸರ್ವಜನಾನುರಾಗವನ್ನು ಹೊಂದಿಬಿಡುತ್ತವೆ. ಅಂಥ ಗ್ರಂಥಗಳಲ್ಲಿ 'ಮುಕುಂದಮಾಲಾ' ಸ್ತೋತ್ರವೂ ಒಂದಾಗಿರುತ್ತದೆ. ಇದು ಮೊದಲು ವಿಶಿಷ್ಟಾದ್ವೈತಿಗಳ ಸ್ತೋತ್ರವಾಗಿದ್ದಿತು ; ಈಗ ವಿಷ್ಣುಭಕ್ತರಾಗಿರುವವರೆಲ್ಲರೂ ಇದನ್ನು ಹೇಳಿಕೊಂಡು ಆನಂದಪಡುತ್ತಿದ್ದಾರೆ.

ಗ್ರಂಥಕರ್ತರಾದ ಕುಲಶೇಖರರೆಂಬವರು ರಾಜರೆಂದೂ ದ್ವಿಜನ್ಮವರ, ಪದ್ಮಸರ - ಎಂಬಿಬ್ಬರು ಇವರಿಗೆ ಮಿತ್ರರಾಗಿದ್ದರೆಂದೂ ಈ ಸ್ತೋತ್ರದಿಂದಲೇ ತಿಳಿದುಬರುತ್ತದೆ. 'ಆಳ್ವಾರ್'ಗಳೆಂದು ಪ್ರಸಿದ್ಧರಾದ ಶ್ರೀವೈಷ್ಣವರ ಹನ್ನೆರಡು ಜನ ಭಕ್ತಾಚಾರ್ಯರುಗಳಲ್ಲಿ ಇವರೂ ಒಬ್ಬರೆಂದೂ ದ್ರಾವಿಡವೇದವೆಂದು ಗಣಿಸಲ್ಪಡುತ್ತಿರುವ ನಾಲಾಯಿರಪ್ರಬಂಧದಲ್ಲಿರುವ ''ಪೆರುಮಾಳ್ ತಿರುಮೊಳಿ'' ಎಂಬ 105 ಪದ್ಯಗಳ ಭಾಗವು ಇವರಿಂದ ರಚಿತವಾಯಿತೆಂದೂ ಶ್ರೀವೈಷ್ಣವ ಸಂಪ್ರದಾಯವನ್ನರಿತವರು ಹೇಳುತ್ತಾರೆ. ಇವರು ಕಲಿಯುಗದ ಆದಿಭಾಗದಲ್ಲಿ ಮಲೆಯಾಳದ ರಾಜರಾಗಿದ್ದರೆನ್ನುವರು.

ಸ್ತೋತ್ರದಲ್ಲಿ ಬಗಬಗೆಯ ವೃತ್ತಗಳಲ್ಲಿ ರಚಿತವಾಗಿರುವ ದ್ರಾಕ್ಷಾಪಾಕದ ನಲವತ್ತು ಪದ್ಯಗಳಿರುವವು. ಇವುಗಳಲ್ಲಿ ಕೆಲವು ಪಾಂಡವಗೀತೆ, ಶ್ರೀಕೃಷ್ಣ ಕರ್ಣಾಮೃತ- ಮುಂತಾದ ಗ್ರಂಥಗಳಲ್ಲಿಯೂ ಕಂಡುಬರುತ್ತವೆ. ಆದರೆ ಆ ಗ್ರಂಥಗಳು ಈಚೆಗೆ ಸಂಕಲಿತವಾಗಿರುವುದರಿಂದ ಅವುಗಳಿಗೆ ಮೂಲವು ಇದೇ-ಎನ್ನುವುದಕ್ಕೆ ಅಡ್ಡಿಯಿರುವದಿಲ್ಲ. ಬೊಂಬಾಯಿಪ್ರಾಂತ್ಯದಲ್ಲಿ ದೇವನಾಗರಿಯಲ್ಲಿ ಅಚ್ಚಾಗಿರುವ ಮುಕುಂದಮಾಲೆಯಲ್ಲಿ ಇಪ್ಪತ್ತೆರಡೇ ಶ್ಲೋಕಗಳಿರುತ್ತವೆ ; ಅವು ಈ ಕ್ರಮದಲ್ಲಿರುವದಿಲ್ಲ. ಆ ಪಾಠದಲ್ಲಿರುವ ಕೆಲವು ಶ್ಲೋಕಗಳು ಈ ಗ್ರಂಥದಲ್ಲಿಲ್ಲವೇ ಇಲ್ಲ. ಅಂಥ ಶ್ಲೋಕಗಳು ಬೇರೆಕಡೆಯಿಂದ ತೆಗೆದುಕೊಂಡವಾಗಿರಬೇಕೆಂಬುದಕ್ಕೆ ಆಧಾರವೂ ಇದೆ. ದಕ್ಷಿಣದೇಶದಲ್ಲಿಯೂ ನಮ್ಮ ಸೀಮೆಯಲ್ಲಿಯೂ ಇಲ್ಲಿ ಮುದ್ರಿತವಾಗಿರುವ ಶ್ಲೋಕಗಳನ್ನೇ ಶ್ರೀವೈಷ್ಣವರು ಪಠಿಸುತ್ತಾರೆಂದು ತಿಳಿದುಬಂದಿದೆ. ಈ ಕಾರಣದಿಂದ ನಲವತ್ತು ಶ್ಲೋಕಗಳನ್ನೂ ಇಲ್ಲಿ ಯಥಾವತ್ತಾಗಿ ಮುದ್ರಿಸಿ ಕನ್ನಡದಲ್ಲಿ

ಭಾವಾರ್ಥವನ್ನು ಕೊಟ್ಟು ಅಡಿಯಲ್ಲಿ ಪಾಠಾಂತರವನ್ನು ತಿಳಿಸುವ ಟಿಪ್ಪಣಿಯನ್ನೂ ಕೊಟ್ಟಿರುತ್ತದೆ. ಪರಿಶಿಷ್ಟದಲ್ಲಿ ಬೊಂಬಾಯಿಯ ಪಾಠದ ಸ್ತೋತ್ರವನ್ನೂ ಕೊಟ್ಟಿರುತ್ತದೆ.

ಹೀಗೆ ಎಲ್ಲಾ ವಿಚಾರದಲ್ಲಿಯೂ ಶುದ್ಧಿಗೊಳಿಸಿ ಅಚ್ಚುಮಾಡಿಸಿರುವ ಈ ಸ್ತೋತ್ರಮಾಲೆಯು ವಿಷ್ಣುಭಕ್ತರಿಗೆಲ್ಲ ಆನಂದದಾಯಕವಾಗಲೆಂದು ಭಗವಂತನನ್ನು ಬೇಡುವೆನು.

**1935** ಅನುವಾದಕ

---

## ಐದನೆಯ ಸಂಸ್ಕರಣಕ್ಕೆ ಮುನ್ನುಡಿ

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಪೂರ್ವಾಶ್ರಮದಲ್ಲಿ ಸಂಪಾದಿಸಿದ್ದ ಈ ಪುಸ್ತಕದ ಪ್ರತಿಗಳೆಲ್ಲವೂ ಮುಗಿದುಹೋದದ್ದರಿಂದ ಐದನೆಯ ಬಾರಿಗೆ ಮತ್ತೆ ಸಂಸ್ಕರಿಸಿ ಪ್ರಕಟಿಸಲಾಗಿದೆ. ಶ್ಲೋಕಗಳನ್ನೂ ಭಾವಾರ್ಥವನ್ನೂ ಅಚ್ಚುಮಾಡಿಸುವುದಕ್ಕೆ ಬೇರೆಬೇರೆಯ ಅಕ್ಷರಗಳನ್ನು ಉಪಯೋಗಿಸಲಾಗಿದೆ. ಶ್ಲೋಕಗಳ ಪಾದಗಳನ್ನೂ ಸಾಲುಸಾಲಾಗಿ ಬೇರ್ಪಡಿಸಿ ಅಚ್ಚುಮಾಡಿಸಿರುವುದು ಓದುಗರಿಗೆ ಪಾಠಕ್ಕೆ ಹೆಚ್ಚಿನ ಸೌಕರ್ಯವನ್ನುಂಟುಮಾಡಿಕೊಟ್ಟಿರುತ್ತದೆ ಎಂದು ನಂಬಿರುತ್ತೇವೆ.

**20-6-91** ಪ್ರಕಾಶಕರು.

---

## ಆರನೆಯ ಸಂಸ್ಕರಣಕ್ಕೆ ಮುನ್ನುಡಿ

1991ರಲ್ಲಿ ಐದನೆಯ ಬಾರಿಗೆ ಮುದ್ರಿತವಾಗಿದ್ದ ಪುಸ್ತಕಗಳೆಲ್ಲವೂ ಮಾರಾಟವಾಗಿದ್ದರಿಂದ ಗ್ರಂಥಶರೀರದಲ್ಲಿ ಬದಲಾವಣೆಯಿಲ್ಲದೆ ಅಚ್ಚಿನ ತಪ್ಪುಗಳನ್ನು ಮಾತ್ರ ತಿದ್ದಿ ಆರನೆಯ ಬಾರಿಗೆ ಈಗ ಹೊರತರಲಾಗಿದೆ. ಕೊನೆಯಲ್ಲಿ ಶ್ಲೋಕಗಳ ಅಕ್ಷರಾಣುಕ್ರಮಣಿಕೆಯನ್ನೂ ಸೇರಿಸಿದೆ. ದಾವಣಗೆರೆಯಲ್ಲಿರುವ ಡಾ|| ಎಸ್.ಆರ್. ಹೆಗ್ಡೆಯವರು ಗ್ರಂಥಪ್ರಕಟಣೆಗೆ ರೂ. 500/- ಧನಸಹಾಯ ಮಾಡಿರುತ್ತಾರೆ. ಎಂದಿನಂತೆ ಭಕ್ತಾದಿಗಳು ಸ್ವೀಕರಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಪಾರ್ಥಿವ ಸಂವತ್ಸರ, **24.12.2005** ಪ್ರಕಾಶಕರು
ಮಾರ್ಗಶಿರ ಬಹುಳ ಅಷ್ಟಮಿ (ಶ್ರೀ ಶೀಗಳವರ ಜಯಂತಿ)

॥ ಶ್ರೀಕೃಷ್ಣಾಯ ಪರಬ್ರಹ್ಮಣೇ ನಮಃ ॥

# ಮುಕುಂದಮಾಲಾ

ಘುಷ್ಯತೇ ಯಸ್ಯ ನಗರೇ ರಙ್ಗಯಾತ್ರಾ ದಿನೇ ದಿನೇ ।
ತಮಹಂ ಶಿರಸಾ ವನ್ದೇ ರಾಜಾನಂ ಕುಲಶೇಖರಮ್ ॥[1]

ಭಾವಾರ್ಥ: ಯಾವಾತನ ನಗರದಲ್ಲಿ ಶ್ರೀರಂಗಯಾತ್ರೆಯ ಘೋಷವು ದಿನದಿನವೂ ಕೇಳಬರುವದೋ ಆ ಕುಲಶೇಖರ ರಾಜನಿಗೆ ನಮಸ್ಕಾರವು.

ಶ್ರೀವಲ್ಲಭೇತಿ ವರದೇತಿ ದಯಾಪರೇತಿ
ಭಕ್ತಪ್ರಿಯೇತಿ ಭವಲುಣ್ಠನಕೋವಿದೇತಿ ।
ನಾಥೇತಿ ನಾಗಶಯನೇತಿ ಜಗನ್ನಿವಾಸೇ-
ತ್ಯಾಲಾಪಿನಂ[2] ಪ್ರತಿದಿನಂ ಕುರು ಮಾಂ ಮುಕುನ್ದ ॥೧॥

೧. ಎಲೈ ಮುಕುಂದನೆ, ನಾನು ಪ್ರತಿದಿನವೂ "ಶ್ರೀವಲ್ಲಭನೆ, ವರದಾಯಕನೆ, ದಯಾಪರನೆ, ಭಕ್ತಪ್ರಿಯನೆ, ಸಂಸಾರವನ್ನು ನಾಶಗೊಳಿಸುವದರಲ್ಲಿ ಸಮರ್ಥನೆ, ನಾಥನೆ, ಶೇಷಶಾಯಿಯೆ, ಜಗನ್ನಿವಾಸನೆ" ಎಂದು (ನಿನ್ನ ನಾಮವನ್ನು) ಉಚ್ಚರಿಸುವಂತೆ ಮಾಡು.

---

1. ಈ ಶ್ಲೋಕವು ಮೂಲಕ್ಕೆ ಸೇರಿದ್ದಲ್ಲ. ಈಚೆಗೆ ಯಾರೋ ಗ್ರಂಥಕರ್ತನ ಶಿಷ್ಯರು ಸೇರಿಸಿದ್ದು. ಶ್ರೀರಂಗಯಾತ್ರೆಯ ಮಾತು ರಾಜನ ನಗರಿಯಾದ ಅನಂತಶಯನದಲ್ಲಿ ಪ್ರತಿದಿನವೂ ಇರುತ್ತಿತ್ತೆಂಬುದರಿಂದ ರಾಜನು ಪ್ರಸಿದ್ಧವಾದ ಶ್ರೀರಂಗಕ್ಕೆ ಆಗಾಗ್ಗೆ ಯಾತ್ರೆಗೆಂದು ಹೋಗಿಬರುತಿದ್ದನೆಂಬುದನ್ನೂ ಅದು ಆತನ ನಗರಿಯಲ್ಲೆಲ್ಲ ಪ್ರಸಿದ್ಧವಾಗಿತೆಂಬುದನ್ನೂ ಸೂಚಿಸಿದಂತಾಯಿತು.

2. ಆಲಾಪನಂ ಪ್ರತಿಪದಂ ಕುರು ಮೇ ಮುಕುನ್ದ ಪಾ ॥

*ಜಯತು ಜಯತು ದೇವೋ ದೇವಕೀನನ್ದನೋಽಯಮ್
ಜಯತು ಜಯತು ಕೃಷ್ಣೋ ವೃಷ್ಣಿವಂಶಪ್ರದೀಪಃ ।
ಜಯತು ಜಯತು ಮೇಘಶ್ಯಾಮಲಃ ಕೋಮಲಾಙ್ಗೋ
ಜಯತು ಜಯತು ಪೃಥ್ವೀಭಾರನಾಶೋ ಮುಕುನ್ದಃ ॥೨॥

೨. ದೇವಕೀಪುತ್ರನಾದ ಈ ದೇವನಿಗೆ ಗೆಲುವು, ಗೆಲುವು ! ವೃಷ್ಣಿವಂಶಕ್ಕೆಲ್ಲ ದೊಡ್ಡ ದೀಪದಂತಿರುವ ಕೃಷ್ಣನಿಗೆ ಗೆಲುವು, ಗೆಲುವು ! ಕೋಮಲವಾದ ಶರೀರವುಳ್ಳ ಮೇಘಶ್ಯಾಮವರ್ಣದವನಿಗೆ ಗೆಲುವು, ಗೆಲುವು ! ಭೂಭಾರವನ್ನು ಪರಿಹರಿಸುವ ಮುಕುಂದನಿಗೆ ಗೆಲುವು, ಗೆಲುವು !

ಮುಕುನ್ದ, ಮೂರ್ಧ್ನಾ ಪ್ರಣಿಪತ್ಯ ಯಾಚೇ
ಭವನ್ತಮೇಕಾನ್ತಮಿಯನ್ತಮರ್ಥಮ್ ।
ಅವಿಸ್ಮೃತಿಸ್ತ್ವಚ್ಚರಣಾರವಿನ್ದೇ
ಭವೇ ಭವೇ ಮೇಽಸ್ತು ಭವತ್ಪ್ರಸಾದಾತ್ ॥೩॥

೩. ಮುಕುಂದನೆ, ಹಣೆಯಿಟ್ಟು ನಮಸ್ಕರಿಸಿ ನಿನ್ನನ್ನು ನಿಯಮದಿಂದ ಇಷ್ಟುಮಾತ್ರ ಬೇಡಿಕೊಳ್ಳುತ್ತಲಿದೇನೆ. ನನಗೆ ಜನ್ಮಜನ್ಮದಲ್ಲಿಯೂ ನಿನ್ನ ಅನುಗ್ರಹದಿಂದ ನಿನ್ನ ಚರಣಕಮಲದ ನೆನಪು ಹೋಗದೆ ಇರಲಿ !

ನಾಹಂ ವನ್ದೇ ತವ ಚರಣಯೋರ್ದ್ವನ್ದ್ವಮದ್ವನ್ದ್ವಹೇತೋಃ
ಕುಮ್ಭೀಪಾಕಂ ಗುರುಮಪಿ ಹರೇ ನಾರಕಂ ನಾಪನೇತುಮ್ ।
ರಮ್ಯಾ ರಾಮಾ ಮೃದುತನುಲತಾ ನನ್ದನೇ ನಾಪಿ ರನ್ತುಂ ಭಾವೇ
ಭಾವೇ ಹೃದಯಭವನೇ ಭಾವಯೇಯಂ ಭವನ್ತಮ್ ॥೪॥

೪. ಎಲೈ ಹರಿಯೆ, ನಿನ್ನ ಚರಣಯುಗವನ್ನು ನಾನು ನಮಸ್ಕರಿಸುತ್ತಿರುವದು ಸುಖದುಃಖಾದಿದ್ವಂದ್ವಗಳಿಂದ ಬಿಡುಗಡೆಯಾಗುವುದಕ್ಕಲ್ಲ ; ಕುಂಭೀಪಾಕನರಕದ ಹೆಚ್ಚಿನ ಯಾತನೆಯನ್ನು ತಪ್ಪಿಸಿಕೊಳ್ಳುವುದಕ್ಕಲ್ಲ ;

---

* ಈ ಗುರುತು ಹಾಕಿರುವ ಶ್ಲೋಕಗಳು 'ಪಾಂಡವಗೀತೆ'ಯಲ್ಲಿವೆ.

ನಂದನವನದಲ್ಲಿ ಮೃದುವಾದ ಬಳ್ಳಿಮೈಯಿನ ರಮಣೀಯಸ್ತ್ರೀಯರನ್ನು ಕ್ರೀಡಿಸುವುದಕ್ಕೂ ಅಲ್ಲ; ಮತ್ತೇಕೆಂದರೆ ಜನ್ಮಜನ್ಮದಲ್ಲಿಯೂ ನನ್ನ ಹೃದಯದ ಕೋಣೆಯಲ್ಲಿ ನಿನ್ನನ್ನು ಭಾವನೆಮಾಡುತ್ತಿರಬೇಕೆಂಬುದಕ್ಕಾಗಿ.

ನಾಸ್ಥಾ ಧರ್ಮೇ ನ ವಸುನಿಚಯೇ ನೈವ ಕಾಮೋಪಭೋಗೇ
ಯದ್ಯದ್ಭಾವ್ಯಂ ಭವತು ಭಗವನ್ ಪೂರ್ವಕರ್ಮಾನುರೂಪಮ್ ।
ಏತತ್ಪ್ರಾರ್ಥ್ಯಂ ಮಮ ಬಹುಮತಂ ಜನ್ಮಜನ್ಮಾನ್ತರೇಽಪಿ
ತ್ವತ್ಪಾದಾಮ್ಭೋರುಹಯುಗಗತಾ ನಿಶ್ಚಲಾ ಭಕ್ತಿರಸ್ತು ॥೫॥

೫. ನನಗೆ ಧರ್ಮದಲ್ಲಿ ಆಸಕ್ತಿಯಿಲ್ಲ, ಧನರಾಶಿಯಲ್ಲಿಯೂ ಇಲ್ಲ, ಕಾಮಗಳ ಉಪಭೋಗದಲ್ಲಂತೂ ಇಲ್ಲವೇ ಇಲ್ಲ ; ಎಲೈ ಭಗವಂತನೆ, ಪೂರ್ವಜನ್ಮದಲ್ಲಿ ಮಾಡಿದ ಕರ್ಮಗಳಿಗೆ ಅನುಗುಣವಾಗಿ ಏನೇನು ಆಗಬೇಕೋ ಅದೆಲ್ಲ ಆಗಲಿ ! ನನಗೆ ಅತ್ಯಂತವಾಗಿ ಬೇಕಾಗಿರುವದೆಂದು ನಿನ್ನನ್ನು ಬೇಡಿಕೊಳ್ಳುವುದು ಯಾವದೆಂದರೆ ಜನ್ಮಜನ್ಮಾಂತರದಲ್ಲಿಯೂ ನಿನ್ನ ಚರಣಕಮಲ ಯುಗದಲ್ಲಿಯೇ ನಿಶ್ಚಲವಾದ ಭಕ್ತಿಯೊಂದಿರಲಿ !

ದಿವಿ ವಾ ಭುವಿ ವಾ ಮಮಾಸ್ತು ವಾಸೋ
ನರಕೇ ವಾ ನರಕಾನ್ತಕ ಪ್ರಕಾಮಮ್ ।
ಅವಧೀರಿತಶಾರದಾರವಿನ್ದೌ
ಚರಣೌ ತೇ ಮರಣೇಽಪಿ ಚಿನ್ತಯಾಮಿ ॥೬॥

೬. ಎಲೈ ನರಕಾಸುರನನ್ನು ನಾಶಗೊಳಿಸಿದಾತನೆ, ನನಗೆ ಸ್ವರ್ಗದಲ್ಲಿ ಯಾದರೂ ಭೂಲೋಕದಲ್ಲಿಯಾದರೂ ನರಕದಲ್ಲಿಯಾದರೂ ಎಲ್ಲಿಬೇಕಾದರೂ ವಾಸವಾಗಲಿ ! ಶರತ್ಕಾಲದ ಕೆಂದಾವರೆಗಳನ್ನು ಧಿಕ್ಕರಿಸುವ ನಿನ್ನೆರಡು ಚರಣ ಗಳನ್ನು ಮರಣಕಾಲದಲ್ಲಿಯೂ ನಾನು ಚಿಂತಿಸುತ್ತಿರುವೆನು.

ಕೃಷ್ಣ ತ್ವದೀಯಪದಪಙ್ಕಜಪಞ್ಜರಾನ್ತ-
ಮದ್ಯೈವ ಮೇ ವಿಶತು ಮಾನಸರಾಜಹಂಸಃ ।

ಪ್ರಾಣಪ್ರಯಾಣಸಮಯೇ ಕಫವಾತಪಿತ್ತೈಃ
ಕಣ್ಠಾವರೋಧನವಿಧೌ ಸ್ಮರಣಂ ಕುತಸ್ತೇ ॥೭॥

೭. ಎಲೈ ಕೃಷ್ಣನೇ, ನಿನ್ನ ಪದಕಮಲವೆಂಬ ಪಂಜರದೊಳಕ್ಕೆ ನನ್ನ ಮಾನಸವೆಂಬ ಹಂಸವು ಈಗಲೇ ಹೊಕ್ಕುಬಿಡಲಿ ! ಕಫ, ವಾತ, ಪಿತ್ತ - ಇವುಗಳಿಂದ ಕಂಠವು ಬಿಗಿದುಕೊಂಡು ಪ್ರಾಣವು ಹೋಗುವ ಸಮಯದಲ್ಲಿ ನಿನ್ನ ನೆನಪು ಎಲ್ಲಿಯದು ?

ಚಿನ್ತಯಾಮಿ ಹರಿಮೇವ ಸನ್ತತಂ
ಮನ್ದಮನ್ದ ಹಸಿತಾನನಾಮ್ಬುಜಮ್ ।
ನನ್ದ ಗೋಪತನಯಂ ಪರಾತ್ಪರಂ
ನಾರದಾದಿಮುನಿಬೃನ್ದವನ್ದಿತಮ್ ॥ ೮ ॥

೮. ಅತಿಮಂದಹಾಸದಿಂದೊಡಗೂಡಿದ ಮುಖಕಮಲವುಳ್ಳಾತನೂ ನಂದಗೋಪನ ಮಗನೂ ಹೆಚ್ಚಿನದಕ್ಕೂ ಹೆಚ್ಚಿನವನೂ ನಾರದಾದಿಮುನಿ ಸಮೂಹದಿಂದ ನಮಸ್ಕೃತನೂ ಆಗಿರುವ ಶ್ರೀಹರಿಯನ್ನೇ ಎಡೆಬಿಡದೆ ಧ್ಯಾನಿಸುವೆನು.

ಕರಚರಣಸರೋಜೇ ಕಾನ್ತಿಮನ್ನೇತ್ರಮೀನೇ
ಶ್ರಮಮುಷಿ ಭುಜವೀಚೀವ್ಯಾಕುಲೇಽಗಾಧಮಾರ್ಗೇ ।
ಹರಿಸರಸಿ ವಿಗಾಹ್ಯಾಪೀಯ ತೇಜೋಜಲೌಘಂ
ಭವಮರುಪರಿಖಿನ್ನಃ ಖೇದಮದ್ಯ ತ್ಯಜಾಮಿ ॥೯॥

೯. ಸಂಸಾರಮರುಭೂಮಿಯಲ್ಲಿ ಆಯಾಸಪಟ್ಟಿದ್ದ ನಾನು ಕರಚರಣಗಳೆಂಬ ಕಮಲಗಳೂ ಕಾಂತಿಯಿಂದ ಕೂಡಿದ ಕಣ್ಣುಗಳೆಂಬ ಮೀನುಗಳೂ ಇರುವ, ತೋಳುಗಳೆಂಬ ಅಲೆಗಳಿಂದ ತುಂಬಿರುವ, ಅಗಾಧವಾದ ಮಾರ್ಗವುಳ್ಳ ಆಯಾಸಪರಿಹಾರಕವಾದ ಹರಿಯೆಂಬ ಸರೋವರದಲ್ಲಿ ಮುಳುಗಿ ತೇಜಸ್ಸೆಂಬ ಜಲರಾಶಿಯನ್ನು ಕುಡಿದು ಇಂದು ಬಳಲಿಕೆಯನ್ನು ಪರಿಹರಿಸಿಕೊಂಡೆನು.

ಸರಸಿಜನಯನೇ ಸಶಙ್ಖಚಕ್ರೇ
ಮುರಭಿದಿ ಮಾ ವಿರಮೇಹ [1] ಚಿತ್ತ ರನ್ತುಮ್ ।
ಸುಖತರಮಪರಂ ನ ಜಾತು ಜಾತೇ
ಹರಿಚರಣಸ್ಮರಣಾಮೃತೇನ ತುಲ್ಯಮ್ ॥೧೦॥

೧೦. ಓ ಚಿತ್ತವೆ, ಕಮಲನೇತ್ರನೂ ಶಂಖಚಕ್ರಧರನೂ ಮುರವೈರಿಯೂ ಆಗಿರುವ ಪರಮಾತ್ಮನಲ್ಲಿಯೇ ಬಿಡದೆ ಆಡುತ್ತಿರು ; ಹರಿಚರಣವನ್ನು ಸ್ಮರಿಸುವ ಅಮೃತಕ್ಕೆ ಸಮಾನವಾಗಿ ಸುಖಕರವಾಗಿರುವ ಮತ್ತೊಂದನ್ನು ನಾನು ಎಂದಿಗೂ ಕಾಣೆನು.

ಮಾ ಭೀರ್ಮನ್ದಮನೋ ವಿಚಿನ್ತ್ಯಬಹುಧಾ ಯಾಮೀಶ್ಚಿರಂ ಯಾತನಾ ।
ನೈವಾಮೀ ಪ್ರಭವನ್ತಿ ಪಾಪರಿಪವಃ ಸ್ವಾಮೀ ನನು ಶ್ರೀಧರಃ ।
ಆಲಸ್ಯಂ ವ್ಯಪನೀಯ ಭಕ್ತಿಸುಲಭಂ ಧ್ಯಾಯಸ್ವ[2] ನಾರಾಯಣಂ ।
ಲೋಕಸ್ಯ ವ್ಯಸನಾಪನೋದನಕರೋ ದಾಸಸ್ಯ ಕಿಂ ನ ಕ್ಷಮಃ ॥೧೧॥

೧೧. ಎಲೈ ಮೂಢಮನವೆ, ಯಮಲೋಕದಲ್ಲಿ ಬಹುಕಾಲ ಆಗುವ ಯಾತನೆಗಳನ್ನು ಬಹುವಾಗಿ ಯೋಚಿಸಿಕೊಂಡು ಹೆದರದಿರು. ಈ ಪಾಪ ಗಳೆಂಬ ಶತ್ರುಗಳು ನಿನ್ನ ಮೇಲೆ ಕೈಮಾಡಲೇ ಆರವು. ಶ್ರೀಧರನು ನಿನ್ನ ಸ್ವಾಮಿಯಲ್ಲವೆ ? ಆಲಸ್ಯವನ್ನು ಬಿಟ್ಟು ಭಕ್ತಿಯಿಂದ ಸುಲಭವಾಗಿ ದೊರಕುವ ನಾರಾಯಣನನ್ನು ಧ್ಯಾನಿಸು. ಲೋಕಕ್ಕೆಲ್ಲ ಆಗುವ ದುಃಖವನ್ನು ಪರಿಹರಿಸ ಬಲ್ಲವನು ತನ್ನ ಭಕ್ತನ ಚಿಂತೆಯನ್ನು ಹೋಗಲಾಡಿಸಲಾರನೆ ?

ಭವಜಲಧಿಗತಾನಾಂ ದ್ವನ್ದ್ವವಾತಾಹತಾನಾಂ
ಸುತದುಹಿತೃ ಕಲತ್ರತ್ರಾಣಭಾರಾರ್ದಿತಾನಾಮ್ ।

---

1. ಮಾ ವಿರಮಸ್ವ ವಾ॥ ; 'ವಿರಮಸ್ವ' ಎಂದೇ ಅಚ್ಚಿನಲ್ಲಿದೆಯಾದರೂ ಅದು ವ್ಯಾಕರಣಶುದ್ಧವಲ್ಲ.
2. ಧ್ಯಾಯಸ್ವ-ಎಂದೇ ಮುದ್ರಿತಪುಸ್ತಕಗಳಲ್ಲಿದೆ. ಇದೂ ವ್ಯಾಕರಣಶುದ್ಧವಲ್ಲ.

ವಿಷಮವಿಷಯತೋಯೇ ಮಜ್ಜತಾಮಪ್ಲವಾನಾಂ
ಭವತಿ ಶರಣಮೇಕೋ ವಿಷ್ಣುಪೋತೋ ನರಾಣಾಮ್ ॥೧೨॥

೧೨. ಸಂಸಾರಸಾಗರದಲ್ಲಿದ್ದುಕೊಂಡು ಸುಖದುಃಖಾದಿದ್ವಂದ್ವಗಳೆಂಬ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ ಮಗ, ಮಗಳು, ಹೆಂಡತಿಯರನ್ನು ಕಾಪಾಡುವದೆಂಬ ಭಾರದಿಂದ ಸಂಕಟಪಡುತ್ತಾ ಕಷ್ಟತರವಾದ ವಿಷಯೆಂಬ ನೀರಿನಲ್ಲಿ ಮುಳುಗುತ್ತಾ ದಾಟುವ ದೋಣಿಯನ್ನು ಕಾಣದೆ ಇರುವ ಜನರಿಗೆ ವಿಷ್ಣುವೆಂಬ ಹಡಗೊಂದೇ ಆಸರೆಯಾಗಿರುವುದು.

ಭವಜಲಧಿಮಗಾಧಂ ದುಸ್ತರಂ ನಿಸ್ತರೇಯಂ
ಕಥಮಹಮಿತಿ ಚೇತೋ ಮಾಸ್ಮ ಗಾಃ ಕಾತರತ್ವಮ್ ।
ಸರಸಿಜದೃಶಿ ದೇವೇ ತಾವಕೀ ಭಕ್ತಿರೇಕಾ
ನರಕಭಿದಿ ನಿಷಣ್ಣಾ ತಾರಯಿಷ್ಯತ್ಯವಶ್ಯಮ್ ॥೧೩॥

೧೩. ಎಲೈ ಚಿತ್ತವೆ, ಆಳವಾಗಿ ದಾಟುವದಕ್ಕಶಕ್ಯವಾಗಿರುವ ಸಂಸಾರ ಸಾಗರವನ್ನು ನಾನು ಹೇಗೆ ದಾಟಿಯೇನೆಂದು ಕಾತರತೆಯನ್ನು ಹೊಂದಬೇಡ. ಕಮಲನಯನನೂ ನರಕಾಸುರಸಂಹಾರಕನೂ ಆದ ವಿಷ್ಣುವಿನಲ್ಲಿ ಇಟ್ಟ ನಿನ್ನ ಭಕ್ತಿಯೊಂದೇ ಅವಶ್ಯವಾಗಿ ನಿನ್ನನ್ನು ದಾಟಿಸಿಬಿಡುವದು.

ತೃಷ್ಣಾತೋಯೇ ಮದನಪವನೋದ್ಧೂತಮೋಹೋರ್ಮಿಮಾಲೇ।
ದಾರಾವರ್ತೇ ತನಯಸಹಜಗ್ರಾಹಸಙ್ಘಾಕುಲೇ ಚ ॥
ಸಂಸಾರಾಖ್ಯೇ ಮಹತಿ ಜಲಧೌ ಮಜ್ಜ ತಾಂ ನಸ್ತ್ರಿಧಾಮನ್
ಪಾದಾಮ್ಭೋಜೇ ವರದ ಭವತೋ ಭಕ್ತಿನಾವಂ ಪ್ರಯಚ್ಛ[1] ॥೧೪॥

೧೪. ಎಲೈ ವರದಾಯಕನೆ, ಮೂರುಲೋಕಗಳ ಒಡೆಯನೆ,ಬಯಕೆಯೆಂಬ ನೀರೂ ಕಾಮವೆಂಬ ಬಿರುಗಾಳಿಯಿಂದೆದ್ದ ಮೋಹದ ತೆರೆಗಳ ಸಾಲುಗಳೂ ಹೆಂಡತಿಯೆಂಬ ಸುಳಿಯೂ ಮಗ , ಅಣ್ಣ ತಮ್ಮಂದಿರು- ಎಂಬ

---

1. ಪ್ರದೇಹಿ ಪಾ॥

ಮೊಸಳೆಗಳ ಗುಂಪೂ ತುಂಬಿರುವ ಸಂಸಾರವೆಂಬ ಮಹಾಸಾಗರದಲ್ಲಿ ಮುಳುಗುತ್ತಿರುವ ನಮಗೆ ನಿನ್ನ ಪಾದಕಮಲದಲ್ಲಿ ಭಕ್ತಿಯೆಂಬ ಹಡಗನ್ನು ಕೊಡುವವನಾಗು.

ಮಾ ದ್ರಾಕ್ಷಂ ಕ್ಷೀಣಪುಣ್ಯಾನ್ ಕ್ಷಣಮಪಿ ಭವತೋ ಭಕ್ತಿಹೀನಾನ್ ಪದಾಬ್ಜೇ ।
ಮಾ ಶ್ರೌಷಂ ಶ್ರಾವ್ಯಬನ್ಧಂ ತವ ಚರಿತಮಪಾಸ್ಯಾನ್ಯದಾಖ್ಯಾನಜಾತಮ್ ॥
ಮಾ ಸ್ಮಾರ್ಷಂ ಮಾಧವ ತ್ವಾಮಪಿ ಭುವನಪತೇ ಚೇತಸಾಪಹ್ನುವಾನಾನ್ ।
ಮಾ ಭೂವಂ ತ್ವತ್ಸಪರ್ಯಾವ್ಯತಿಕರರಹಿತೋ ಜನ್ಮಜನ್ಮಾನ್ತರೇಽಪಿ ॥

೧೫. ಎಲೈ ಮಾಧವನೇ, ನಾನು ನಿನ್ನ ಪದಕಮಲದಲ್ಲಿ ಭಕ್ತಿಯಿಲ್ಲದ ಪುಣ್ಯಹೀನರನ್ನು ಒಂದು ಕ್ಷಣವಾದರೂ ನೋಡುವಂತಾಗಬೇಡ; ಕೇಳುವದಕ್ಕೆ ಇಂಪಾಗಿರುವ ನಿನ್ನ ಚರಿತೆಯ ಕಾವ್ಯವನ್ನಲ್ಲದೆ ಮತ್ತೊಂದು ಕಥೆಯನ್ನು ಎಂದಿಗೂ ಕೇಳುವಂತಾಗಬೇಡ; ಭುವನಗಳೊಡೆಯನೆ, ನಿನ್ನನ್ನು ಕೂಡ ಇಲ್ಲವೆನ್ನುವವರನ್ನು ಚಿತ್ತದಲ್ಲಿ ನಾನು ಸ್ಮರಿಸುವಂತೆ ಆಗಬೇಡ ; ನಾನು ನಿನ್ನ ಸಂಬಂಧವಿಲ್ಲದವನಂತೂ ಜನ್ಮಜನ್ಮಾಂತರದಲ್ಲಿಯೂ ಆಗದಿರಲಿ !

ಜಿಹ್ವೇ ಕೀರ್ತಯ ಕೇಶವಂ ಮುರರಿಪುಂ ಚೇತೋ ಭಜ ಶ್ರೀಧರಂ ।
ಪಾಣಿದ್ವನ್ದ್ವ ಸಮರ್ಚಯಾಚ್ಯುತಕಥಾಃ ಶ್ರೋತ್ರದ್ವಯ ತ್ವಂ ಶೃಣು ॥
ಕೃಷ್ಣಂ ಲೋಕಯ ಲೋಚನದ್ವಯ ಹರೇರ್ಗಚ್ಛಾಙ್ಘ್ರಿಯುಗ್ಮಾಲಯಂ ।
ಜಿಘ್ರ ಘ್ರಾಣ ಮುಕುನ್ದಪಾದತುಲಸೀಂ ಮೂರ್ಧನ್ನಮಾಧೋಕ್ಷಜಮ್ ॥

೧೬. ನಾಲಗೆಯೆ, ಕೇಶವನ ನಾಮಕೀರ್ತನೆಯನ್ನು ಮಾಡು. ಮನಸ್ಸೆ, ಮುರವೈರಿಯನ್ನು ಭಜಿಸು. ಎಲೈ ಕೈಗಳೆ, ಶ್ರೀಧರನನ್ನು ಪೂಜಿಸಿ. ಕಿವಿಗಳೆ, ಅಚ್ಯುತನ ಕಥೆಯನ್ನು ಕೇಳಿ. ಕಣ್ಣುಗಳೆ, ಕೃಷ್ಣನನ್ನು ನೋಡಿರಿ. ಕಾಲುಗಳೆ, ಶ್ರೀಹರಿಯ ದೇವಸ್ಥಾನಕ್ಕೆ ನಡೆಯಿರಿ. ಮೂಗೆ, ಮುಕುಂದನ

ಪಾದದಲ್ಲಿರುವ ತುಳಸಿಯನ್ನು ಮೂಸು. ತಲೆಯೆ, ಅಧೋಕ್ಷಜನಿಗೆ ನಮಸ್ಕಾರಮಾಡು.

ಹೇ ಲೋಕಾಃ ಶೃಣುತ ಪ್ರಸೂತಿಮರಣವ್ಯಾಧೇಶ್ಚಿಕಿತ್ಸಾಮಿಮಾಂ ।
ಯೋಗಜ್ಞಾಃ ಸಮುದಾಹರನ್ತಿ ಮುನಯೋ ಯಂ ಯಾಜ್ಞವಲ್ಕ್ಯಾದಯಃ ॥
ಅನ್ತರ್ಜ್ಯೋತಿರಮೇಯಮೇಕಮಮೃತಂ ಕೃಷ್ಣಾಖ್ಯಮಾಪೀಯತಾಂ ।
ತತ್ಪೀತಂ[1] ಪರಮೌಷಧಂ ವಿತನುತೇ ನಿರ್ವಾಣಮಾತ್ಯನ್ತಿಕಮ್ ॥೧೭॥

೧೭. ಎಲೈ ಜನಗಳಿರ, ಜನನಮರಣವೆಂಬ ರೋಗಕ್ಕೆ ಈ ಚಿಕಿತ್ಸೆಯನ್ನು ಕೇಳಿರಿ ; ಇದನ್ನು ಯಾಜ್ಞವಲ್ಕ್ಯರೇ ಮುಂತಾದ ಯೋಗಶಾಸ್ತ್ರಜ್ಞರು ಹೇಳುತ್ತಿರುವರು. ಒಳಗೇ ಬೆಳಗುತ್ತಿರುವ ಪ್ರಮಾಣಾತೀತವಾದ ಕೃಷ್ಣನೆಂಬ ಅಮೃತವೊಂದನ್ನೇ ಕುಡಿಯಿರಿ. ಆ ಪರಮೌಷಧವನ್ನು ಕುಡಿದರೆ ಆತ್ಯಂತಿಕಸುಖವನ್ನುಂಟುಮಾಡುವದು.

ಹೇ ಮರ್ತ್ಯಾಃ ಪರಮಂ ಹಿತಂ ಶೃಣುತ ವೋ ವಕ್ಷ್ಯಾಮಿ ಸಂಕ್ಷೇಪತಃ ।
ಸಂಸಾರಾರ್ಣವಮಾಪದೂರ್ಮಿಬಹುಲಂ ಸಮ್ಯಕ್ ಪ್ರವಿಶ್ಯ ಸ್ಥಿತಾಃ ॥
ನಾನಾಜ್ಞಾನಮಪಾಸ್ಯ ಚೇತಸಿ ನಮೋ ನಾರಾಯಣಾಯೇತ್ಯಮುಂ ।
ಮನ್ತ್ರಂ ಸಪ್ರಣವಂ ಪ್ರಣಾಮಸಹಿತಂ ಪ್ರಾವರ್ತಯಧ್ವಂ ಮುಹುಃ ॥

೧೮. ಎಲೈ ವಿಪತ್ತುಗಳೆಂಬ ಹೆದ್ದೆರೆಗಳೇ ಹೆಚ್ಚಾಗಿರುವ ಸಂಸಾರ ಸಾಗರವನ್ನು ಪೂರ್ತಿಯಾಗಿ ಹೊಕ್ಕು ಅಲ್ಲಿಯೇ ಇರುವ ಮರ್ತ್ಯರುಗಳಿರ, ನಿಮಗೆ ಪರಮಹಿತವಾದದ್ದೊಂದನ್ನು ಸಂಕ್ಷೇಪವಾಗಿ ಹೇಳುವೆನು ಕೇಳಿ. ಬಗೆಬಗೆಯ ಜ್ಞಾನವನ್ನೆಲ್ಲ ಬಿಟ್ಟು , ಓಂಕಾರದಿಂದೊಡಗೂಡಿದ 'ನಮೋ ನಾರಾಯಣಾಯ' ಎಂಬೀ ಮಂತ್ರವನ್ನು ನಮಸ್ಕಾರಸಹಿತವಾಗಿ ಬಾರಿ ಬಾರಿಗೂ ಚಿತ್ತದಲ್ಲಿ ಜಪಿಸಿರಿ.

---

1. ಯತ್ಪೀತಂ ಪಾ॥

ಪೃಥ್ವೀರೇಣುರಣುಃ ಪಯಾಂಸಿ ಕಣಿಕಾಃ ಫಲ್ಗುಸ್ಫುಲಿಙ್ಗೋ ಲಘು-
ಸ್ತೇಜೋ ನಿಃಶ್ವಸನಂ ಮರುತ್ತನುತರಂ ರನ್ಧ್ರಂ ಸುಸೂಕ್ಷ್ಮಂ ನಭಃ ॥
ಕ್ಷುದ್ರಾ ರುದ್ರಪಿತಾಮಹಪ್ರಭೃತಯಃ ಕೀಟಾಃ ಸಮಸ್ತಾಃ ಸುರಾ ।
ದೃಷ್ಟೇರ್ಯತ್ರ[1] ಸ ತಾವಕೋ ವಿಜಯತೇ ಭೂಮಾವಧೂತಾವಧಿಃ[2] ।

೧೯. ಯಾವದರಲ್ಲಿರುವ ದೃಷ್ಟಿಗೆ ಪೃಥ್ವಿಯು ಸಣ್ಣ ಧೂಳಿಯ ಕಣವಾಗಿಯೂ, ಸಮುದ್ರಗಳು ನೀರಿನ ತೊಟ್ಟುಗಳಾಗಿಯೂ, ತೇಜಸ್ಸೆಲ್ಲವೂ ಸಣ್ಣ ಕಿಡಿಯಾಗಿಯೂ, ಗಾಳಿಯೆಲ್ಲವೂ ಮೆಲ್ಲುಸಿರಾಗಿಯೂ ಕಾಣುವವೋ ಆಕಾಶವೆಲ್ಲವೂ ಒಂದು ಬಲು ಚಿಕ್ಕ ರಂಧ್ರವೂ ಆಗಿಬಿಡುವದೋ,ರುದ್ರ, ಬ್ರಹ್ಮ -ಮೊದಲಾದ ದೇವತೆಗಳೆಲ್ಲರೂ ಅತಿಕ್ಷುದ್ರವಾದ ಹುಳುಹುಪ್ಪಟೆಗಳಾಗಿ ಕಾಣುವರೋ, ಅಂಥ ಎಲೆಕಟ್ಟಿಲ್ಲದ ನಿನ್ನ ಭೂಮದ ಮಹಿಮೆಯು ಸರ್ವೋತ್ಕೃಷ್ಟವಾಗಿರುವದು.

ಬುದ್ಧೇನಾಞ್ಜಲಿನಾ ನತೇನ ಶಿರಸಾ ಗಾತ್ರೈಃ ಸರೋಮೋದ್ಗಮೈಃ ।
ಕಣ್ಠೇನ ಸ್ವರಗದ್ಗದೇನ ನಯನೇನೋದ್ಗೀರ್ಣಬಾಷ್ಪಾಮ್ಬುನಾ ॥
ನಿತ್ಯಂ ತ್ವಚ್ಚರಣಾರವಿನ್ದಯುಗಲಧ್ಯಾನಾಮೃತಾಸ್ವಾದಿನಾ-
ಮಸ್ಮಾಕಂ ಸರಸೀರುಹಾಕ್ಷ ಸತತಂ ಸಂಪದ್ಯತಾಂ ಜೀವಿತಮ್ ॥

೨೦. ಎಲೈ ಕಮಲನೇತ್ರನೆ, ಯಾವಾಗಲೂ ನಿನ್ನ ಚರಣಕಮಲ ಯುಗ್ಮವನ್ನೇ ಧ್ಯಾನಮಾಡುವ ಅಮೃತವನ್ನು ಸವಿನೋಡುತ್ತಿರುವ ನಮ್ಮಗಳ ಜೀವನದಲ್ಲಿ ಯಾವಾಗಲೂ ಕೈಗಳು ಮುಗಿದುಕೊಂಡಿರಲಿ, ತಲೆಯು ಬಾಗಿರಲಿ, ಶರೀರವು ಹೋಂಪುಳಿಯಿಂದ ಕೂಡಿರಲಿ, ಕಂಠವು ಗದ್ಗದಸ್ವರ ಯುಕ್ತವಾಗಿರಲಿ, ನೇತ್ರವು ಆನಂದಬಾಷ್ಪಗಳನ್ನು ಬಿಡುತ್ತಿರಲಿ!

ಹೇ ಗೋಪಾಲಕ, ಹೇ ಕೃಪಾಜಲನಿಧೇ, ಹೇ ಸಿನ್ಧುಕನ್ಯಾಪತೇ
ಹೇ ಕಂಸಾನ್ತಕ, ಹೇ ಗಜೇನ್ದ್ರಕರುಣಾಪಾರೀಣ, ಹೇ ಮಾಧವ ॥

---

1. ದೃಷ್ಟೇ ಯತ್ರ ಪಾ॥ 2. ವಿಜಯತೇ ಶ್ರೀಪಾದಧೂಲೀಕಣಃ ಪಾ॥

ಹೇ ರಾಮಾನುಜ, ಹೇ ಜಗತ್ತ್ರಯಗುರೋ, ಹೇ ಪುಂಡರೀಕಾಕ್ಷ ಮಾಂ।
ಹೇ ಗೋಪಿಜನನಾಥ ಪಾಲಯ ಪರಂ ಜಾನಾಮಿ ನ ತ್ವಾಂ ವಿನಾ ॥

೨೧. ಎಲೈ ಗೋಪಾಲನೆ, ಎಲೈ ದಯಾಸಾಗರನೆ, ಎಲೈ ಸಾಗರನ ಮಗಳಾದ ಲಕ್ಷ್ಮಿಯ ಪತಿಯೆ, ಎಲೈ ಕಂಸಾಸುರನನ್ನು ಸಂಹರಿಸಿದಾತನೆ , ಎಲೈ ಗಜೇಂದ್ರನಲ್ಲಿ ಕರುಣವನ್ನು ತೋರುವದರಲ್ಲಿ ಕೊನೆಯನ್ನು ಮುಟ್ಟಿದಾತನೆ , ಎಲೈ ಮಾಧವನೆ, ಎಲೈ ಬಲರಾಮನ ತಮ್ಮನೆ, ಎಲೈ ಮೂರು ಜಗತ್ತಿಗೂ ಗುರುವಾದಾತನೆ, ಎಲೈ ಕಮಲನೇತ್ರನೆ, ಎಲೈ ಗೋಪಿಜನರ ಒಡೆಯನೆ, ನನ್ನನ್ನು ಕಾಪಾಡು ! ನಿನ್ನನ್ನು ಬಿಟ್ಟು ಮತ್ತೊಬ್ಬರನ್ನು ನಾನು ಅರಿಯೆನು.

ಭಕ್ತಾಪಾಯಭುಜಙ್ಗಗಾರುಡಮಣಿಸ್ತ್ರೈಲೋಕ್ಯರಕ್ಷಾಮಣಿ-
ರ್ಗೋಪೀಲೋಚನಚಾತಕಾಮ್ಬುದಮಣಿಃ ಸೌನ್ದರ್ಯಮುದ್ರಾಮಣಿಃ ॥
ಯಃ ಕಾನ್ತಾಮಣಿರುಕ್ಮಿಣೀಘನಕುಚದ್ವನ್ದ್ವೈಕಭೂಷಾಮಣಿಃ
ಶ್ರೇಯೋ ದೇವಶಿಖಾಮಣಿರ್ದಿಶತು ನೋ
ಗೋಪಾಲಚೂಡಾಮಣಿಃ ॥೨೨॥

೨೨. ಭಕ್ತರಿಗೊದಗುವ ಅಪಾಯಗಳೆಂಬ ಸರ್ಪಗಳಿಗೆ ಗರುಡಶ್ರೇಷ್ಠನಾಗಿಯೂ ಮೂಲೋಕವನ್ನು ಕಾಪಾಡುವ ರಕ್ಷಾಮಣಿಯಾಗಿಯೂ ಗೋಪಿಯರ ಕಣ್ಣುಗಳೆಂಬ ಚಾತಕಪಕ್ಷಿಗಳಿಗೆ ಮೇಘಶ್ರೇಷ್ಠವಾಗಿಯೂ ಸೌಂದರ್ಯದ ಉತ್ತಮವಾದ ಮುದ್ರೆಯಾಗಿಯೂ ಸ್ತ್ರೀರತ್ನವೆನಿಸಿದ ರುಕ್ಮಿಣೀದೇವಿಯ ಘನಕುಚಯುಗಲಕ್ಕೆ ಒಳ್ಳೆಯ ಅಲಂಕಾರನಾಗಿಯೂ ಇರುವ ದೇವತೆಗಳೊಡೆಯನಾದ ಗೋಪಾಲಶ್ರೇಷ್ಠನು ನಮಗೆ ಶ್ರೇಯಸ್ಸನ್ನು ತೋರಿಕೊಡುವವನಾಗಲಿ.

ಶತ್ರುಚ್ಛೇದೈಕಮನ್ತ್ರಂ ಸಕಲಮುಪನಿಷದ್ವಾಕ್ಯಸಂಪೂಜ್ಯಮನ್ತ್ರಮ್ ।
ಸಂಸಾರೋತ್ತಾರಮನ್ತ್ರಂ ಸಮುಪಚಿತತಮಸ್ಸಙ್ಘನಿರ್ಯಾಣಮನ್ತ್ರಮ್
ಸರ್ವೈಶ್ವರ್ಯೈಕಮನ್ತ್ರಂ ವ್ಯಸನಭುಜಗಸನ್ದಷ್ಟಸಂತ್ರಾಣಮನ್ತ್ರಮ್ ।
ಜಿಹ್ವೇ ಶ್ರೀಕೃಷ್ಣಮನ್ತ್ರಂ ಜಪ ಜಪ ಸತತಂ ಜನ್ಮ ಸಾಫಲ್ಯಮನ್ತ್ರಮ್ ॥

೨೩. ಎಲೈ ನಾಲಗೆಯೆ, ಶತ್ರುಗಳನ್ನು ಗೆಲ್ಲುವ ಮುಖ್ಯ ಮಂತ್ರವಾಗಿಯೂ ಉಪನಿಷದ್ವಾಕ್ಯಗಳಿಂದ ಗೌರವಿಸಲ್ಪಟ್ಟಿರುವ ಸಂಪೂಜ್ಯಮಂತ್ರವಾಗಿಯೂ ಸಂಸಾರವನ್ನು ದಾಟಿಸುವ ಮಂತ್ರವಾಗಿಯೂ ದಟ್ಟವಾದ ಅಜ್ಞಾನದ ಕತ್ತಲೆಯನ್ನು ತೊಲಗಿಸುವ ಮಂತ್ರವಾಗಿಯೂ ಸರ್ವೈಶ್ವರ್ಯಗಳನ್ನೂ ಕೊಡುವ ಮಂತ್ರವಾಗಿಯೂ ಕೆಟ್ಟ ವ್ಯಸನಗಳೆಂಬ ಹಾವುಗಳಿಂದ ಕಚ್ಚಲ್ಪಟ್ಟವರನ್ನು ಕಾಪಾಡುವ ಮಂತ್ರವಾಗಿಯೂ ಜನ್ಮಸಾರ್ಥಕ್ಯವನ್ನು ಉಂಟುಮಾಡುವ ಮಂತ್ರವಾಗಿಯೂ ಇರುವ ಶ್ರೀಕೃಷ್ಣಮಂತ್ರವನ್ನು ಯಾವಾಗಲೂ ಜಪಿಸು, ಜಪಿಸು.

ವ್ಯಾಮೋಹಪ್ರಶಮೌಷಧಂ ಮುನಿಮನೋವೃತ್ತಿಪ್ರವೃತ್ತ್ಯೌಷಧಂ
ದೈತ್ಯೇನ್ದ್ರಾರ್ತಿಕರೌಷಧಂ ತ್ರಿಭುವನೀಸಂಜೀವನೈಕೌಷಧಮ್ ।
ಭಕ್ತಾತ್ಯನ್ತಹಿತೌಷಧಂ ಭವಭಯಪ್ರಧ್ವಂಸನೈಕೌಷಧಂ
ಶ್ರೇಯಃಪ್ರಾಪ್ತಿಕರೌಷಧಂ ಪಿಬ ಮನಃ ಶ್ರೀಕೃಷ್ಣದಿವ್ಯೌಷಧಮ್ ॥

೨೪. ಎಲೈ ಮನವೆ, ಅಜ್ಞಾನವನ್ನು ಶಾಂತಿಗೊಳಿಸುವ ಔಷಧವೂ ಮುನಿಗಳ ಮನಸ್ಸಿನ ವೃತ್ತಿಗಳನ್ನು ಸರಿಯಾದ ದಾರಿಯಲ್ಲಿ ಬಿಡುವ ಔಷಧವೂ ದೈತ್ಯಶ್ರೇಷ್ಠರಿಗೂ ಸಂಕಟವನ್ನುಂಟುಮಾಡುವ ಔಷಧವೂ ಮೂರು ಲೋಕವನ್ನೂ ಬದುಕಿಸುವ ಮುಖ್ಯವಾದ ಔಷಧವೂ ಭಕ್ತರಿಗೆ ಅತ್ಯಂತ ಹಿತವನ್ನುಂಟುಮಾಡುವ ಔಷಧವೂ ಸಂಸಾರದ ಭಯವನ್ನು ನಾಶಗೊಳಿಸುವ ಮುಖ್ಯೌಷಧವೂ ಮುಕ್ತಿಯನ್ನು ಪಡೆಯಿಸುವ ಔಷಧವೂ ಆಗಿರುವ ಶ್ರೀಕೃಷ್ಣನೆಂಬ ದಿವ್ಯೌಷಧವನ್ನು ಕುಡಿ.

ಆಮ್ನಾಯಾಭ್ಯಸನಾನ್ಯರಣ್ಯರುದಿತಂ ವೇದವ್ರತಾನ್ಯನ್ವಹಂ
ಮೇದಶ್ಛೇದಫಲಾನಿ ಪೂರ್ತವಿಧಯಃ ಸರ್ವೇ ಹುತಂ ಭಸ್ಮನಿ ।
ತೀರ್ಥಾನಾಮವಗಾಹನಾನಿ ಚ ಗಜಸ್ನಾನಂ ವಿನಾಯತ್ಪದ-
ದ್ವನ್ದ್ವಾಮ್ಭೋರುಹಸಂಸ್ಮೃತಿಂ ವಿಜಯತೇ ದೇವಃ ಸ ನಾರಾಯಣಃ ॥

೨೫. ಯಾವಾತನ ಪದದ್ವಂದ್ವವೆಂಬ ಕಮಲದ ಸ್ಮರಣೆಯೊಂದಿಲ್ಲ ದಿದ್ದರೆ, ವೇದಾಧ್ಯಯನಗಳು ಅರಣ್ಯರೋದನವಾಗುವವೋ, ವೇದದಲ್ಲಿ ಹೇಳಿರುವ ವ್ರತಗಳನ್ನು ಪ್ರತಿದಿನವೂ ಮಾಡಿದರೂ ಕೊಬ್ಬನ್ನು ಕರಗಿಸುವದೆಂಬ ಒಂದೇ ಫಲವಾಗುವದೋ, (ವಾಪೀಕೂಪತಟಾಕಾದಿಗಳನ್ನು ಕಟ್ಟಿಸುವ ದೆಂಬ) ಪೂರ್ತಕರ್ಮಗಳು ಬೂದಿಯಲ್ಲಿ ಹೋಮಮಾಡಿದಂತಾಗುವವೋ ತೀರ್ಥಗಳಲ್ಲಿ ಮುಳುಗುವದೆಲ್ಲವೂ (ನೀರಿನಲ್ಲಿ ಮುಳುಗಿ ಕೆಸರನ್ನು ಹೊಯ್ದು ಕೊಳ್ಳುವ) ಆನೆಯ ಸ್ನಾನದಂತೆ ಆಗಿಬಿಡುವದೋ ಅಂಥ ನಾರಾಯಣ ದೇವನು ಸರ್ವೋತ್ಕೃಷ್ಟನಾಗಿರುವನು.

ಶ್ರೀಮನ್ನಾಮ ಪ್ರೋಚ್ಯ ನಾರಾಯಣಾಖ್ಯಂ
ಕೇ ನ ಪ್ರಾಪುರ್ವಾಂಛಿತಂ ಪಾಪಿನೋಽಪಿ
ಹಾ ನಃ ಪೂರ್ವಂ ವಾಕ್ ಪ್ರವೃತ್ತಾ ನ ತಸ್ಮಿಂ
ಸ್ತೇನ ಪ್ರಾಪ್ತಂ ಗರ್ಭವಾಸಾದಿದುಃಖಮ್ ॥೨೬॥

೨೬. ಎಂಥ ಪಾಪಿಗಳೇ ಆಗಲಿ, ನಾರಾಯಣನೆಂಬ ಶ್ರೀಮನ್ನಾಮ ವನ್ನು ಉಚ್ಚರಿಸಿ ತಮ್ಮ ಇಷ್ಟಾರ್ಥವನ್ನು ಪಡೆಯದೆ ಇದ್ದವರು ಯಾರಿದ್ದಾರೆ ? ಅಯ್ಯೋ ! ಹಿಂದೆ ನಮ್ಮ ವಾಕ್ಕು ಅದರಲ್ಲಿ ತೊಡಗಲಿಲ್ಲ. ಆದ್ದರಿಂದಲೇ ಗರ್ಭವಾಸವೇ ಮುಂತಾದ ದುಃಖವು ಬಂದೊದಗಿದೆ.

ಮಜ್ಜನ್ಮನಃ ಫಲಮಿದಂ ಮಧುಕೈಟಭಾರೇ
ಮತ್ಪ್ರಾರ್ಥನೀಯಮದನುಗ್ರಹ ಏಷ ಏವ ।
ತ್ವದ್ಭೃತ್ಯಭೃತ್ಯಪರಿಚಾರಕಭೃತ್ಯಭೃತ್ಯ -
ಭೃತ್ಯಸ್ಯ ಭೃತ್ಯ ಇತಿ ಮಾಂ ಸ್ಮರ ಲೋಕನಾಥ ॥೨೭॥

೨೭. ಮಧುಕೈಟಭರನ್ನು ಕೊಂದಾತನೆ, ನನ್ನ ಜನ್ಮಕ್ಕೆ ಇದೊಂದೇ ಫಲವು; ನನ್ನ ಮೇಲೆ ನೀನು ಅನುಗ್ರಹಮಾಡಬೇಕೆಂದು ನಾನು ಬೇಡಿಕೊಳ್ಳ ತಕ್ಕದ್ದು ಇದೊಂದೇ : ಎಲೈ ಲೋಕನಾಥನೆ, ನಿನ್ನ ದಾಸರ ದಾಸರನ್ನು ಸೇವೆ

ಮಾಡುವ ದಾಸರ ದಾಸರ ದಾಸನ ದಾಸನೆಂದು ಮಾತ್ರ ನನ್ನನ್ನು ನೆನಪಿನಲ್ಲಿಡು.

ನಾಥೇ ನಃ ಪುರುಷೋತ್ತಮೇ ತ್ರಿಜಗತಾಮೇಕಾಧಿಪೇ ಚೇತಸಾ ।
ಸೇವ್ಯೇ ಸೇವ್ಯಪದಸ್ಯ ದಾತರಿ ಸುರೇ ನಾರಾಯಣೇ ತಿಷ್ಠತಿ ॥
ಯಂ ಕಂಚಿತ್ಪುರುಷಾಧಮಂ ಕತಿಪಯಗ್ರಾಮೇಶಮಲ್ಪಾರ್ಥದಂ ।
ಸೇವಾಯೈ ಮೃಗಯಾಮಹೇ ನರಮಹೋ ಮೂಕಾ ವರಾಕಾ ವಯಮ್

೨೮. ಪುರುಷೋತ್ತಮನೂ, ಮೂರು ಲೋಕಕ್ಕೂ ತಾನೊಬ್ಬನೇ ಒಡೆಯನೂ, ಮನಃಪೂರ್ವಕವಾಗಿ ಸೇವಿಸುವದಕ್ಕೆ ತಕ್ಕವನೂ, ಸೇವ್ಯವಾದ ಸ್ಥಾನವನ್ನು ಕೊಡುವಾತನು, ದೇವತೆಯೂ ಆಗಿರುವ ನಮ್ಮೊಡೆಯನಾದ ನಾರಾಯಣನು ಇರುತ್ತಿರುವಾಗ ಯಾವನೋ ಒಬ್ಬ ಪುರುಷಾಧಮನೂ, ಎಲ್ಲಿಯೋ ಕೆಲವು ಹಳ್ಳಿಗಳಿಗೆ ಒಡೆಯನೂ, ಎಲ್ಲಿಯೋ ಒಂದಿಷ್ಟು ಕೊಡಬಲ್ಲವನೂ ಆಗಿರುವ ನರನನ್ನು ನಾವು ಸೇವಿಸಬೇಕೆಂದು ಹುಡುಕುತ್ತಿರುವೆವಲ್ಲ! ಆಹಾ, ನಾವು ಎಂಥ ಮೂಢರು, ಎಂಥ ತುಚ್ಛರು!

ಮದನ ಪರಿಹರ ಸ್ಥಿತಿಂ ಮದೀಯೇ
ಮನಸಿ ಮುಕುನ್ದಪದಾರವಿನ್ದಧಾಮ್ನಿ।
ಹರನಯನಕೃಶಾನುನಾ ಕೃಶೋಽಸಿ
ಸ್ಮರಸಿ ನ ಚಕ್ರಪರಾಕ್ರಮಂ ಮುರಾರೇಃ ॥೨೯॥

೨೯. ಎಲಾ ಮನ್ಮಥನೆ, ನನ್ನ ಮನಸ್ಸು ಮುಕುಂದನ ಪದಕಮಲಕ್ಕೆ ಸ್ಥಳವಾಗಿರುವದರಿಂದ ಅದರಲ್ಲಿ ವಾಸಮಾಡುವದನ್ನು ನೀನು ಬಿಟ್ಟುಬಿಡು. ಶಿವನ ಕಣ್ಗಿಂಡದಿಂದ ಅನಂಗನಾಗಿದ್ದೀಯೆ, ಆದರೂ ಮುರವೈರಿಯಾದ ಶ್ರೀಕೃಷ್ಣನ ಚಕ್ರದ ಪರಾಕ್ರಮವನ್ನು ನೆನಪಿಗೆ ತಂದುಕೊಳ್ಳದಿರುವೆಯಲ್ಲ!

ತತ್ತ್ವಂ ಬ್ರುವಾಣಾನಿ ಪರಂ ಪರಸ್ಮಾ-
ನ್ಮಧು ಕ್ಷರನ್ತೀವ ಸತಾಂ ಫಲಾನಿ ।

ಪ್ರಾವರ್ತಯ ಪ್ರಾಞ್ಜಲಿರಸ್ಮಿ ಜಿಹ್ವೇ
ನಾಮಾನಿ ನಾರಾಯಣಗೋಚರಾಣಿ ॥೩೦॥

೩೦. ಎಲೈ ನಾಲಗೆಯೆ, ನಿನಗೆ ಕೈಮುಗಿಯುತ್ತೇನೆ, ಹೆಚ್ಚಿನದಕ್ಕಿಂತ ಹೆಚ್ಚಿನದಾದ ತತ್ತ್ವವನ್ನು ತಿಳಿಸುವವಾಗಿಯೂ, ಸಜ್ಜನರಿಗೆ ಜೇನುತುಪ್ಪವನ್ನು ಸುರಿಸುವ ಫಲಗಳಾಗಿಯೂ ಇರುವ ನಾರಾಯಣನ ವಿಷಯವಾದ ನಾಮಗಳನ್ನೇ ಜಪಿಸುತ್ತಿರು.

ಇದಂ ಶರೀರಂ ಪರಿಣಾಮಪೇಶಲಂ
ಪತತ್ಯವಶ್ಯಂ ಶ್ಲಥಸನ್ಧಿ ಜರ್ಜರಮ್ ।
ಕಿಮೌಷಧೈಃ ಕ್ಲಿಶ್ಯಸಿ ಮೂಢ ದುರ್ಮತೇ
ನಿರಾಮಯಂ ಕೃಷ್ಣರಸಾಯನಂ ಪಿಬ ॥೩೧॥

೩೧. ಈ ಶರೀರವು ಪರಿಣಾಮದಿಂದ ಬಹುಮೆತ್ತಗಾಗಿ ಕೀಲುಗಳೆಲ್ಲ ಕಳಚಿ ಬಲಗುಂದಿ ಅವಶ್ಯವಾಗಿ ಬಿದ್ದೇಹೋಗುವದು; ಮೂಢನೆ, ತಿಳಿಗೇಡಿಯೆ, ಔಷಧಗಳನ್ನು ಕುಡಿದು ಸುಮ್ಮನೆ ಏಕೆ ಆಯಾಸಪಡುತ್ತಿರುವೆ ? ಯಾವ ರೋಗಕ್ಕೂ ಎಡೆಗೊಡದ ಕೃಷ್ಣರಸಾಯನವನ್ನು ಕುಡಿ.

ದಾರಾ ವಾರಾಕರವರಸುತಾ ತೇ ತನೂಜೋ ವಿರಿಞ್ಚಃ । [1]
ಸ್ತೋತ್ತಾ ವೇದಸ್ತವ ಸುರಗಣೋ ಭೃತ್ಯವರ್ಗಃ ಪ್ರಸಾದಃ ।
ಮುಕ್ತಿರ್ಮಾಯಾ ಜಗದವಿಕಲಂ ತಾವಕೀ ದೇವಕೀ ತೇ
ಮಾತಾ ಮಿತ್ರಂ ವಲರಿಪುಸುತಸ್ತ್ವಯ್ಯತೋಽನ್ಯನ್ನ ಜಾನೇ ॥ ೩೨॥

೩೨. ನಿನ್ನ ಹೆಂಡತಿಯು ಸಮುದ್ರನ ಮಗಳು, ಮಗನು ಬ್ರಹ್ಮನು, ನಿನ್ನನ್ನು ಸ್ತೋತ್ರಮಾಡುವದು ವೇದವು, ನಿನ್ನ ದಾಸವರ್ಗವು ದೇವತೆಗಳ

---

1. ವಿರಞ್ಚಃ ॥ಪಾ॥

ಗುಂಪು, ನಿನ್ನ ಪ್ರಸಾದವು ಮುಕ್ತಿಯು, ನಿನ್ನ ಮಾಯೆಯು ಇಡಿಯ ಜಗತ್ತು, ನಿನ್ನ ತಾಯಿಯು ದೇವಕಿಯು, ಸ್ನೇಹಿತನು ಇಂದ್ರನ ಮಗನಾದ ಅರ್ಜುನನು- ಇಷ್ಟನ್ನು ಹೊರತು ನಿನ್ನ ವಿಷಯದಲ್ಲಿ ಮತ್ತೇನನ್ನೂ ಅರಿಯೆನು.

ಕೃಷ್ಣೋ ರಕ್ಷತು ನೋ ಜಗತ್ತ್ರಯಗುರುಃ ಕೃಷ್ಣಂ ನಮಸ್ಯಾಮ್ಯಹಂ
ಕೃಷ್ಣೇನಾಮರಶತ್ರವೋ ವಿನಿಹತಾಃ ಕೃಷ್ಣಾಯ ತಸ್ಮೈ ನಮಃ ।
ಕೃಷ್ಣಾದೇವ ಸಮುತ್ಥಿತಂ ಜಗದಿದಂ ಕೃಷ್ಣಸ್ಯ ದಾಸೋಽಸ್ಮ್ಯಹಂ
ಕೃಷ್ಣೇ ತಿಷ್ಠತಿ ಸರ್ವಮೇತದಖಿಲಂ ಹೇ ಕೃಷ್ಣ ರಕ್ಷಸ್ವ ಮಾಮ್ ॥೩೩॥

೩೩. ಮೂರು ಲೋಕಕ್ಕೂ ಗುರುವಾದ ಕೃಷ್ಣನು ನಮ್ಮನ್ನು ರಕ್ಷಿಸಲಿ ! ನಾನು ಕೃಷ್ಣನನ್ನು ನಮಸ್ಕರಿಸುವೆನು, ಕೃಷ್ಣನಿಂದ ದೇವತೆಗಳ ಶತ್ರುಗಳು ಕೊಲ್ಲಲ್ಪಟ್ಟರು. ಆ ಕೃಷ್ಣನಿಗೆ ನಮಸ್ಕಾರವು! ಈ ಜಗತ್ತು ಕೃಷ್ಣನ ದೆಸೆಯಿಂದಲೇ ಹುಟ್ಟಿರುವದು. ನಾನು ಕೃಷ್ಣನ ದಾಸನಾಗಿರುವೆನು. ಇದೆಲ್ಲವೂ ಕೃಷ್ಣನಲ್ಲಿಯೇ ನಿಂತಿರುವದು. ಎಲೈ ಕೃಷ್ಣನೇ, ನನ್ನನ್ನು ಕಾಪಾಡು!

ಸ ತ್ವಂ [1] ಪ್ರಸೀದ ಭಗವನ್ ಕುರು ಮಯ್ಯನಾಥೇ
ವಿಷ್ಣೋ ಕೃಪಾಂ ಪರಮಕಾರುಣಿಕಃ ಕಿಲ ತ್ವಮ್ ।
ಸಂಸಾರಸಾಗರನಿಮಗ್ನಮನನ್ತ ದೀನ -
ಮುದ್ಧರ್ತುಮರ್ಹಸಿ ಹರೇ ಪುರುಷೋತ್ತಮೋಽಸಿ ॥೩೪॥

೩೪. ಎಲೈ ಭಗವಂತನೆ, ಆ ನೀನು ನನ್ನಲ್ಲಿ ಪ್ರಸನ್ನನಾಗು. ಎಲೈ ವಿಷ್ಣುವೆ, ಅನಾಥನಾದ ನನ್ನಲ್ಲಿ ದಯಮಾಡು. ನೀನು ಪರಮಕಾರುಣಿಕನಲ್ಲವೆ ? ಸಂಸಾರಸಾಗರದಲ್ಲಿ ನಿಮಗ್ನನಾಗಿರುವ ದೀನನಾದ ನನ್ನನ್ನು ಎಲೈ ಅನಂತನೆ, ಉದ್ಧಾರಮಾಡಬೇಕು. ಹರಿಯೆ, ನೀನು ಪುರುಷೋತ್ತಮನಾಗಿರುವೆಯಲ್ಲವೆ?

1. 'ತತ್ತ್ವಂ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

ನಮಾಮಿ ನಾರಾಯಣಪಾದಪಙ್ಕಜಂ
ಕರೋಮಿ ನಾರಾಯಣಪೂಜನಂ ಸದಾ ।
ವದಾಮಿ ನಾರಾಯಣನಾಮ ನಿರ್ಮಲಂ
ಸ್ಮರಾಮಿ ನಾರಾಯಣತತ್ತ್ವಮವ್ಯಯಮ್ ॥೩೫॥

೩೫. ನಾರಾಯಣನ ಪಾದಕಮಲವನ್ನೇ ನಮಸ್ಕರಿಸುವೆನು. ನಾರಾಯಣನ ಪೂಜೆಯನ್ನೇ ಯಾವಾಗಲೂ ಮಾಡುತ್ತಿರುವೆನು. ನಾರಾಯಣನ ಪರಿಶುದ್ಧನಾಮವನ್ನೇ ಉಚ್ಚರಿಸುತ್ತಿರುವೆನು. ನಾಶರಹಿತವಾದ ನಾರಾಯಣ ತತ್ತ್ವವನ್ನೇ ಸ್ಮರಿಸುತ್ತಿರುವೆನು.

ಶ್ರೀನಾಥ, ನಾರಾಯಣ, ವಾಸುದೇವ,
ಶ್ರೀಕೃಷ್ಣ, ಭಕ್ತಪ್ರಿಯ, ಚಕ್ರಪಾಣೇ ।
ಶ್ರೀಪದ್ಮನಾಭಾಚ್ಯುತ, ಕೈಟಭಾರೇ,
ಶ್ರೀರಾಮ, ಪದ್ಮಾಕ್ಷ, ಹರೇ, ಮುರಾರೇ ॥೩೬॥

೩೬. 'ಲಕ್ಷ್ಮೀಪತಿಯೆ, ನಾರಾಯಣನೆ, ವಸುದೇವಪುತ್ರನೆ, ಶ್ರೀಕೃಷ್ಣನೆ, ಭಕ್ತಪ್ರಿಯನೆ, ಚಕ್ರವನ್ನು ಕೈಯಲ್ಲಿ ಹಿಡಿದಿರುವಾತನೆ, ಶ್ರೀಪದ್ಮನಾಭನೆ, ಅಚ್ಯುತನೆ, ಕೈಟಭಾಸುರನ ಶತ್ರುವೆ, ಶ್ರೀರಾಮನೆ, ಕಮಲ ನೇತ್ರನೆ, ಹರಿಯೆ, ಮುರವೈರಿಯೆ,

ಅನನ್ತ, ವೈಕುಣ್ಠ, ಮುಕುನ್ದ, ಕೃಷ್ಣ,
ಗೋವಿನ್ದ, ದಾಮೋದರ, ಮಾಧವೇತಿ ।
ವಕ್ತುಂ ಸಮರ್ಥೋಽಪಿ ನ ವಕ್ತಿ ಕಶ್ಚಿ-
ದಹೋ ಜನಾನಾಂ ವ್ಯಸನಾಭಿಮುಖ್ಯಮ್ ॥೩೭॥

೩೭. 'ಅನಂತನೆ, ವೈಕುಂಠವಾಸಿಯೆ, ಮುಕುಂದನೆ, ಕೃಷ್ಣನೆ, ಗೋವಿಂದನೆ, ದಾಮೋದರನೆ, ಮಾಧವನೆ'- ಎಂದು ನುಡಿಯುವುದಕ್ಕೆ

ಶಕ್ತರಾಗಿದ್ದರೂ ಯಾರೊಬ್ಬರೂ ಈ ನಾಮಗಳನ್ನುಚ್ಚರಿಸರಲ್ಲ ! ಆಹಾ ! ಜನರು ವ್ಯಸನಗಳಲ್ಲಿಯೇ ತೊಡಗಿರುವದನ್ನು ಏನು ಹೇಳೋಣ[1] !

ಧ್ಯಾಯನ್ತಿ ಯೇ ವಿಷ್ಣುಮನನ್ತಮವ್ಯಯಂ
ಹೃತ್ಪದ್ಮಮಧ್ಯೇ ಸತತಂ ವ್ಯವಸ್ಥಿತಮ್ ।
ಸಮಾಹಿತಾನಾಂ ಸತತಾಭಯಪ್ರದಂ
ತೇ ಯಾನ್ತಿ ಸಿದ್ಧಿಂ ಪರಮಾಂ ಚ ವೈಷ್ಣವೀಮ್ ॥೩೮॥

೩೮. ಅಂತವಿಲ್ಲದವನೂ ನಾಶರಹಿತನೂ ಹೃತ್ಕಮಲದ ನಡುವೆ ಯಾವಾಗಲೂ ಇದ್ದುಕೊಂಡು ಯಾರ ಮನಸ್ಸು ತನ್ನಲ್ಲಿಯೇ ಸಮಾಧಾನ ದಿಂದ ನಿಂತಿರುವದೋ ಅವರಿಗೆ ಯಾವಾಗಲೂ ಅಭಯವನ್ನು ಕೊಡುತ್ತಿರು ವವನೂ ಆಗಿರುವ ವಿಷ್ಣುವನ್ನು ಯಾರು ಧ್ಯಾನಮಾಡುತ್ತಿರುವರೋ ಅವರು ವಿಷ್ಣುವಿನ ಪರಮಸಿದ್ಧಿಯನ್ನು ಪಡೆಯುತ್ತಾರೆ.

ಕ್ಷೀರಸಾಗರತರಙ್ಗಶೀಕರಾ-
ಸಾರತಾರಕಿತಚಾರುಮೂರ್ತಯೇ ।
ಭೋಗಿಭೋಗಶಯನೀಯಶಾಯಿನೇ
ಮಾಧವಾಯ ಮಧುವಿದ್ವಿಷೇ ನಮಃ ॥೩೯॥

೩೯. ಕ್ಷೀರಸಾಗರದ ಅಲೆಗಳ ನೀರುಹನಿಗಳು ಬಿದ್ದು ನಕ್ಷತ್ರಗಳಂತೆ ಕಾಣುತ್ತಿರುವ ಸುಂದರವಾದ ಶರೀರವುಳ್ಳಾತನೂ ಸರ್ಪದ ಶರೀರದ ಹಾಸಿಗೆಯ ಮೇಲೆ ಪವಡಿಸಿರುವಾತನೂ ಮಧುವೈರಿಯೂ ಆದ ಮಾಧವನಿಗೆ ನಮಸ್ಕಾರ!

ಯಸ್ಯ ಪ್ರಿಯೌ ಶ್ರುತಿಧರೌ ಕವಿಲೋಕವೀರೌ
ಮಿತ್ರೇ ದ್ವಿಜನ್ಮವರಪದ್ಮಶರಾವಭೂತಾಮ್ ।

---

1. ಈ ಶ್ಲೋಕದ ಪಾಠವು ಬೊಂಬಾಯಿಕೋಶದಲ್ಲಿ ತುಂಬ ಭಿನ್ನವಾಗಿವೆ.

ತೇನಾಮ್ಬುಜಾಕ್ಷಚರಣಾಮ್ಬುಜಷಟ್ಪದೇನ
ರಾಜ್ಞಾ ಕೃತಾ ಕೃತಿರಿಯಂ ಕುಲಶೇಖರೇಣ ॥ ೪೦॥

೪೦. ಯಾವಾತನಿಗೆ ವೇದವಿದರಾಗಿಯೂ ಕವಿಶ್ರೇಷ್ಠರಾಗಿಯೂ ಇರುವ ದ್ವಿಜನ್ಮವರ, ಪದ್ಮಶರ-ಎಂಬ ಇಬ್ಬರು ಮಿತ್ರರಿದ್ದರೋ ಕಮಲನೇತ್ರನಾದ ವಿಷ್ಣುವಿನ ಪದಕಮಲಕ್ಕೆ ಭ್ರಮರದಂತಿರುವ ಆ ಕುಲಶೇಖರರಾಜನಿಂದ ಈ ಗ್ರಂಥವು ರಚಿತವಾಯಿತು.

ಇತಿ ಶ್ರೀಮುಕುನ್ದಮಾಲಾಸ್ತೋತ್ರಂ ಸಂಪೂರ್ಣಮ್

# ಪರಿಶಿಷ್ಟ

## ಮುಕುನ್ದಮಾಲಾ - ಬೊಂಬಾಯಿಪಾಠ

ವನ್ದೇ ಮುಕುನ್ದಮರವಿನ್ದದಲಾಯತಾಕ್ಷಂ
ಕುನ್ದೇನ್ದುಶಙ್ಖ ದಶನಂ ಶಿಶುಗೋಪವೇಷಮ್ ।
ಇನ್ದ್ರಾದಿದೇವಗಣವನ್ದಿತಪಾದಪೀಠಂ
ವೃನ್ದಾವನಾಲಯಮಹಂ ವಸುದೇವಸೂನುಮ್ ॥೧॥

ಶ್ರೀವಲ್ಲಭೇತಿ ವರದೇತಿ ದಯಾಪರೇತಿ
ಭಕ್ತಪ್ರಿಯೇತಿ ಭವಲುಣ್ಠನಕೋವಿದೇತಿ ।
ನಾಥೇತಿ ನಾಗಶಯನೇತಿ ಜಗನ್ನಿವಾಸೆ -
ತ್ಯಾಲಾಪಿನಂ ಪ್ರತಿದಿನಂ ಕುರು ಮಾಂ ಮುಕುನ್ದ ॥೨॥

ಜಯತು ಜಯತು ದೇವೋ ದೇವಕೀನನ್ದನೋಽಯಂ
ಜಯತು ಜಯತು ಕೃಷ್ಣೋ ವೃಷ್ಣಿವಂಶಪ್ರದೀಪಃ ।
ಜಯತು ಜಯತು ಮೇಘಶ್ಯಾಮಲಃ ಕೋಮಲಾಙ್ಗೋ
ಜಯತು ಜಯತು ಪೃಥ್ವೀಭಾರನಾಶೋ ಮುಕುನ್ದಃ ॥೩॥

ಮುಕುನ್ದ ಮೂರ್ಧ್ನಾ ಪ್ರಣಿಪತ್ಯ ಯಾಚೇ
ಭವನ್ತ ಮೇಕಾನ್ತಮಿಯನ್ತಮರ್ಥಮ್ ।
ಅವಿಸ್ಮೃತಿಸ್ತ್ವಚ್ಚರಣಾರವಿನ್ದೇ
ಭವೇ ಭವೇ ಮೇಽಸ್ತು ತವ ಪ್ರಸಾದಾತ್ ॥೪॥

ಶ್ರೀಗೋವಿನ್ದಪದಾಮ್ಭೋಜಮಧುನೋ ಮಹದದ್ಭುತಮ್ ।
ಯತ್ಪಾಯಿನೋ ನ ಮುಹ್ಯನ್ತಿ ಮುಹ್ಯನ್ತಿ[1] ಯದಪಾಯಿನಃ ॥೫॥

1. 'ಮುಞ್ಚನ್ತಿ' ಎಂಬ ಪಾಠಕ್ಕಿಂತ ಇದು ಮೇಲು.

ನಾಹಂ ವನ್ದೇ ತವ ಚರಣಯೋರ್ದ್ವನ್ದ್ವಮದ್ವನ್ದ್ವಹೇತೋಃ
ಕುಮ್ಭೀಪಾಕಂ ಗುರುಮಪಿ ಹರೇ ನಾರಕಂ ನಾಪನೇತುಮ್ ।
ರಮ್ಯಾ ರಾಮಾ ಮೃದುತನುಲತಾ ನನ್ದನೇ ನಾಪಿ ರನ್ತುಂ
ಭಾವೇ ಭಾವೇ ಹೃದಯಭವನೇ ಭಾವಯೇಯಂ ಭವನ್ತಮ್ ॥೬॥

ನಾಸ್ಥಾ ಧರ್ಮೇ ನ ವಸುನಿಚಯೇ ನೈವ ಕಾಮೋಪಭೋಗೇ
ಯದ್ಭಾವ್ಯಂ ತದ್ಭವತು ಭಗವನ್ಪೂರ್ವಕರ್ಮಾನುರೂಪಮ್ ।
ಏತತ್ಪ್ರಾರ್ಥ್ಯಂ ಮಮ ಬಹುಮತಂ ಜನ್ಮಜನ್ಮಾನ್ತರೇऽಪಿ
ತ್ವತ್ಪಾದಾಮ್ಭೋರುಹಯುಗಗತಾ ನಿಶ್ಚಲಾ ಭಕ್ತಿರಸ್ತು ॥ ೭॥

ದಿವಿ ವಾ ಭುವಿ ವಾ ಮಮಾಸ್ತು ವಾಸೋ
ನರಕೇ ವಾ ನರಕಾನ್ತಕ ಪ್ರಕಾಮಮ್ ।
ಅವಧೀರಿತಶಾರದಾರವಿನ್ದೌ
ಚರಣೌ ತೇ ಮರಣೇ ವಿಚಿನ್ತಯಾಮಿ ॥೮॥

ಸರಸಿಜನಯನೇ ಸಶಙ್ಖಚಕ್ರೇ ಮುರಭಿದಿ
ಮಾ ವಿರಮೇಹ ಚಿತ್ತ ರನ್ತುಮ್ ।
ಸುಖತರಮಪರಂ ನ ಜಾತು ಜಾನೇ
ಹರಿಚರಣಸ್ಮರಣಾಮೃತೇನ ತುಲ್ಯಮ್ ॥೯॥

ಮಾ ಭೀರ್ಮನ್ದಮನೋ ವಿಚಿನ್ತ್ಯ ಬಹುಧಾ ಯಾಮೀಶ್ಚಿರಂ ಯಾತನಾ
ನೈವಾಮೀ ಪ್ರಭವನ್ತಿ ಪಾಪರಿಪವಃ ಸ್ವಾಮೀ ನನು ಶ್ರೀಧರಃ ।
ಆಲಸ್ಯಂ ವ್ಯಪನೀಯ ಭಕ್ತಿಸುಲಭಂ ಧ್ಯಾಯಸ್ವ ನಾರಾಯಣಂ
ಲೋಕಸ್ಯ ವ್ಯಸನಾಪನೋದನಕರೋ ದಾಸಸ್ಯ ಕಿಂ ನ ಕ್ಷಮಃ ॥೧೦॥

ಭವಜಲಧಿಗತಾನಾಂ ದ್ವನ್ದ್ವವಾತಾಹತಾನಾಂ
ಸುತದುಹಿತೃಕಲತ್ರತ್ರಾಣಭಾರಾವೃತಾನಾಮ್ ।

ವಿಷಮವಿಷಯತೋಯೇ ಮಜ್ಜತಾಮಪ್ಲವಾನಾಂ
ಭವತಿ ಶರಣಮೇಕೋ ವಿಷ್ಣುಪೋತೋ ನರಾಣಾಮ್ ॥೧೧॥

ರಜಸಿ ನಿಪತಿತಾನಾಂ ಮೋಹಜಾಲಾವೃತಾನಾಂ
ಜನನಮರಣದೋಲಾದುರ್ಗಸಂಸರ್ಗಗಾಣಾಮ್ ।
ಶರಣಮಶರಣಾನಾಮೇಕ ಏವಾತುರಾಣಾಂ
ಕುಶಲಪಥನಿಯುಕ್ತಶ್ಚಕ್ರಪಾಣಿರ್ನರಾಣಾಮ್ ॥೧೨॥

ಅಪರಾಧಸಹಸ್ರಸಙ್ಕುಲಂ ಪತಿತಂ ಭೀಮಭವಾರ್ಣವೋದರೇ ।
ಅಗತಿಂ ಶರಣಾಗತಂ ಹರೇ ಕೃಪಯಾ ಕೇವಲಮಾತ್ಮಸಾತ್ಕುರು ॥೧೩॥

ಮಾ ಮೇ ಸ್ತ್ರೀತ್ವಂ ಮಾ ಚ ಮೇ ಸ್ಯಾತ್ಕುಭಾವೋ
ಮಾ ಮೂರ್ಖತ್ವಂ ಮಾ ಕುದೇಶೇಷು ಜನ್ಮ ।
ಮಿಥ್ಯಾದೃಷ್ಟಿರ್ಮಾ ಚ ಮೇ ಸ್ಯಾತ್ಕದಾಚಿಜ್ಜಾತೌ
ಜಾತೌ ವಿಷ್ಣುಭಕ್ತೋ ಭವೇಯಮ್ ॥೧೪॥

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾನುಸೃತಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೈವ ಸಮರ್ಪಯಾಮಿ ॥೧೫॥

ಯತ್ಕೃತಂ ಯತ್ಕರಿಷ್ಯಾಮಿ ತತ್ಸರ್ವಂ ನ ಮಯಾ ಕೃತಮ್ ।
ತ್ವಯಾ ಕೃತಂ ತು ಫಲಭುಕ್ತ್ವಮೇವ ಮಧುಸೂದನ ॥೧೬॥

ಭವಜಲಧಿಮಗಾಧಂ ದುಸ್ತರಂ ನಿಸ್ತರೇಯಂ
ಕಥಮಹಮಿತಿ ಚೇತೋ ಮಾ ಸ್ಮ ಗಾಃ ಕಾತರತ್ವಮ್ ।
ಸರಸಿಜದೃಶಿ ದೇವೇ ತಾರಕೀ ಭಕ್ತಿರೇಕಾ
ನರಕಭಿದಿ ನಿಷಣ್ಣಾ ತಾರಯಿಷ್ಯತ್ಯವಶ್ಯಮ್ ॥೧೭॥

ತೃಷ್ಣಾತ್ತೋಯೇ ಮದನಪವನೋದ್ಧೂತಮೋಹೋರ್ಮಿಮಾಲೇ
ದಾರಾವರ್ತೇ ತನಯಸಹಜಗ್ರಾಹಸಙ್ಘಾಕುಲೇ ಚ ।
ಸಂಸಾರಾಖ್ಯೇ ಮಹತಿ ಜಲಧೌ ಮಜ್ಜತಾಂ ನ ಸ್ತ್ರಿಧಾಮ-
ನ್ಪಾದಾಮ್ಭೋಜೇ ವರದ ಭವತೋ ಭಕ್ತಿಭಾವಂ ಪ್ರದೇಹಿ ॥೧೮॥

ಪೃಥ್ವೀರೇಣುರಣುಃ ಪಯಾಂಸಿ ಕಣಿಕಾಃ ಫಲ್ಗುಃ ಸ್ಫುಲಿಙ್ಗೋ ಲಘು-
ಸ್ತೇಜೋ ನಿಃಶ್ವಸನಂ ಮರುತ್ತನುತರಂ ರನ್ಧ್ರಂ ಸುಸೂಕ್ಷ್ಮಂ ನಭಃ ।
ಕ್ಷುದ್ರಾ ರುದ್ರಪಿತಾಮಹಪ್ರಭೃತಯಃ ಕೀಟಾಃ ಸಮಸ್ತಾಃ ಸುರಾ
ದೃಷ್ಟಾ ಯತ್ರ ಸ ತಾರಕೋ ವಿಜಯತೇ ಶ್ರೀಪಾದಧೂಲೀಕಣಃ ॥೧೯॥

ಆಮ್ನಾಯಾಭ್ಯಸನಾನ್ಯರಣ್ಯರುದಿತಂ ಕೃಚ್ಛ್ರವ್ರತಾನ್ಯನ್ವಹಂ
ಮೇದಶ್ಛೇದಪದಾನಿ ಪೂರ್ತವಿಧಯಃ ಸರ್ವಂ ಹುತಂ ಭಸ್ಮನಿ ।
ತೀರ್ಥಾನಾಮವಗಾಹನಾನಿ ಚ ಗಜಸ್ನಾನಂ ವಿನಾ ಯತ್ಪದ-
ದ್ವನ್ದ್ವಾಮ್ಭೋರುಹಸಂಸ್ತುತಿಂ ವಿಜಯತೇ ದೇವಃ ಸ ನಾರಾಯಣಃ॥೨೦॥

ಆನನ್ದ, ಗೋವಿನ್ದ, ಮುಕುನ್ದ, ರಾಮ,
ನಾರಾಯಣಾನನ್ತ, ನಿರಾಮಯೇತಿ ।
ವಕ್ತುಂ ಸಮರ್ಥೋಽಪಿ ನ ವಕ್ತಿ ಕಶ್ಚಿ-
ದಹೋ ಜನಾನಾಂ ವ್ಯಸನಾನಿ ಮೋಕ್ಷೇ ॥೨೧॥

ಕ್ಷೀರಸಾಗರತರಙ್ಗಸೀಕರಾ-
ಸಾರತಾರಕಿತಚಾರುಮೂರ್ತಯೇ ।
ಭೋಗಿಭೋಗಶಯನೀಯಶಾಯಿನೇ
ಮಾಧವಾಯ ಮಧುವಿದ್ವಿಷೇ ನಮಃ ॥೨೨॥

ಇತಿ ಶ್ರೀಕುಲಶೇಖರೇಣ ರಾಜ್ಞಾ ವಿರಚಿತಾ ಮುಕುನ್ದಮಾಲಾ ಸಂಪೂರ್ಣಾ

# ಶ್ಲೋಕಗಳ ಅಕ್ಷರಾನುಕ್ರಮಣಿಕೆ

ಸೂಚನೆ: ಮೊದಲನೆಯದು ಪುಟಸಂಖ್ಯೆ, ಎರಡನೆಯದು ಶ್ಲೋಕಸಂಖ್ಯೆ.


| | |
|---|---|
| ಅನನ್ತ ವೈಕುಣ್ಠ | 16-37 |
| ಆಮ್ನಾಯಾಭ್ಯಸನಾನಿ | 11-25 |
| ಇದಂ ಶರೀರಂ | 14-31 |
| ಕರಚರಣಸರೋಜೇ | 4-9 |
| ಕೃಷ್ಣತ್ವದೀಯ | 4-7 |
| ಕೃಷ್ಣೋ ರಕ್ಷತು | 15-33 |
| ಕ್ಷೀರಸಾಗರತರಙ್ಗ | 17-39 |
| ಚಿನ್ತಯಾಮಿ ಹರಿಮೇವ | 4-8 |
| ಜಯತು ಜಯತು | 2-2 |
| ಜಿಹ್ವೇ ಕೀರ್ತಯ | 7-16 |
| ತತ್ತ್ವಂ ಬ್ರುವಾಣಾನಿ | 14-30 |
| ತೃಷ್ಣಾತೋಯೇ | 6-14 |
| ದಾರಾ ವಾರಾಕರ | 14-32 |
| ದಿವಿ ವಾ ಭುವಿ ವಾ | 3-6 |
| ಧ್ಯಾಯನ್ತಿ ಯೇ | 17-38 |
| ನಮಾಮಿ ನಾರಾಯಣ | 16-35 |
| ನಾಥೇ ನಃ ಪುರುಷೋತ್ತಮೇ | 13-28 |
| ನಾಸ್ತಾ ಧರ್ಮೇ | 3-5 |
| ನಾಹಂ ವನ್ದೇ | 2-4 |
| ಪೃಥ್ವೀರೇಣುರಣುಃ | 9-19 |
| ಬದ್ಧೇನಾಞ್ಜಲಿನಾ | 9-20 |
| ಭಕ್ತಾಪಾಯಭುಜಙ್ಗ | 10-22 |
| ಭವಜಲಧಿಗತಾನಾಂ | 5-12 |
| ಭವಜಲಧಿಮಗಾಧಂ | 6-13 |
| ಮಜ್ಜನ್ಮನಃ ಫಲಮಿದಂ | 12-27 |
| ಮದನ ಪರಿಹರಸ್ಥಿತಿಂ | 13-29 |
| ಮಾ ದ್ರಾಕ್ಷಂ ಕ್ಷೀಣಪುಣ್ಯಾನ್ | 7-15 |
| ಮಾ ಭೀರ್ಮನ್ದಮನೋ | 5-11 |
| ಮುಕುನ್ದ, ಮೂರ್ಧ್ನಾ | 2-3 |
| ಯಸ್ಯ ಪ್ರಿಯೌ | 18-40 |
| ವ್ಯಾಮೋಹಪ್ರಶಮೌಷಧಂ | 11-24 |
| ಶತ್ರುಚ್ಛೇದೈಕಮನ್ತ್ರಂ | 10-23 |
| ಶ್ರೀನಾಥ ನಾರಾಯಣ | 16-36 |
| ಶ್ರೀಮನ್ನಾಮಪ್ರೋಚ್ಯ | 12-26 |
| ಶ್ರೀವಲ್ಲಭೇತಿ | 1-1 |
| ಸ ತ್ವಂ ಪ್ರಸೀದ | 15-34 |
| ಸರಸಿಜನಯನೇ | 5-10 |
| ಹೇ ಗೋಪಾಲಕ | 10-21 |
| ಹೇ ಮರ್ತ್ಯಾಃ | 8-18 |
| ಲೇ ಹೋಕಾಃ | 8-17 |

## ಭಕ್ತರ ಪ್ರೇಮವನ್ನು ಉಕ್ಕೇರಿಸುವ
## ಕೆಲವು ಸ್ತೋತ್ರ, ಪದ, ಪದ್ಯ - ಗ್ರಂಥಗಳು

1. **ಶ್ರೀರಾಮ ಹೃದಯ :** ಸೀತಾದೇವಿಯೂ ಶ್ರೀರಾಮನೂ ಹನುಮಂತನಿಗೆ ಮಾಡಿದ ತತ್ತ್ವೋಪದೇಶವಿದು. ಪಾಠಾಂತರಸಹಿತ ಮೂಲ, ಅರ್ಥ, ಟಿಪ್ಪಣಿ, ಸಾರಾಂಶ - ಇಷ್ಟೂ ಇವೆ. **(ಮೂರನೆಯ ಮುದ್ರಣ, ಪು. ಕ್ರೌನ್ 22)**

2. **ಶ್ರೀರಾಮಗೀತೆ :** ಅಧ್ಯಾತ್ಮರಾಮಾಯಣದಿಂದ ಆರಿಸಿದ ಭಾಗವಿದು. ಶ್ರೀರಾಮನು ಲಕ್ಷ್ಮಣನಿಗೆ ಮಾಡಿದ ಅಮೋಘವಾದ ಉಪದೇಶವು ಇದರಲ್ಲಿದೆ. ಇದರಲ್ಲಿ ಮಹಾವಾಕ್ಯವಿಚಾರವೂ ಪರಮಾತ್ಮನಲ್ಲಿ ಪ್ರಪಂಚವನ್ನೆಲ್ಲ ಲಯಗೊಳಿಸಿಕೊಳ್ಳುವ ಸಾಧನಕ್ರಮವೂ ಉಕ್ತವಾಗಿದೆ. ಜ್ಞಾನಕ್ಕೆ ಭಕ್ತಿಯೇ ಸಾಧನವೆಂದು ಪ್ರತಿಪಾದಿಸಿದೆ. ಮೂಲ, ಭಾವಾರ್ಥ, ಟಿಪ್ಪಣಿ, ಶ್ಲೋಕಾನುಕ್ರಮಣಿಕೆ - ಇಷ್ಟೂ ಈ ಪುಸ್ತಕದಲ್ಲಿವೆ.
**(ಎರಡನೆಯ ಸಂಸ್ಕರಣ, ಪು. ಕ್ರೌನ್ 6+34)**

3. **ಭಗವಚ್ಛರಣಸ್ತೋತ್ರ :** ಶ್ರೀ ಬ್ರಹ್ಮಾನಂದಸ್ವಾಮಿಗಳವರ ಕೃತಿ. ಅಧ್ಯಾತ್ಮತತ್ತ್ವವನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಬೇಕೆನ್ನುವವರು ಯಾವ ಯಾವ ಸಾಧನಗಳನ್ನು ಅಳವಡಿಸಿಕೊಂಡಿರಬೇಕೆಂಬುದನ್ನೂ ಭಗವಂತನಿಗೆ ಶರಣು ಹೋಗುವದು ಬಹು ಮುಖ್ಯವಾದ ಸಾಧನವೆಂಬುದನ್ನೂ ಪ್ರಕಟಿಸುವ ಸಣ್ಣ ಪ್ರಕರಣವಿದು. ಸಾಧಕರಿಗೆ ಅಮೂಲ್ಯವಾದದ್ದು. ಮೂಲಶ್ಲೋಕಗಳು, ಭಾವಾರ್ಥ ವಿವರಣೆ - ಇಷ್ಟೂ ಇವೆ.
**(ನಾಲ್ಕನೆಯ ಮುದ್ರಣ, ಪು. ಕ್ರೌನ್ 4+60)**

4. **ಶಿವನಾಮಾಷ್ಟೋತ್ತರಶತಕ :** ಸ್ಕಾಂದಪುರಾಣದ ಶಾಂಕರಸಂಹಿತೆಯ ಶಿವರಹಸ್ಯದಲ್ಲಿ ಗೌರೀನಾರಾಯಣಸಂವಾದರೂಪವಾಗಿರುವ ಸುಪ್ರಸಿದ್ಧ ಸ್ತೋತ್ರವಿದು. ಮೂಲದ ಶ್ಲೋಕಗಳನ್ನು ಕೊಟ್ಟು ಪ್ರತಿಯೊಂದು ನಾಮದ ಅರ್ಥ ವಿವರಣೆಯನ್ನೂ ಕೊಟ್ಟಿರುತ್ತದೆ. ಪುಸ್ತಕದ ಕೊನೆಯಲ್ಲಿ ಮತ್ತೆ ಪಾಠಕರ ಸೌಕರ್ಯಕ್ಕಾಗಿ ಅಷ್ಟೋತ್ತರ ಸಂಸ್ಕೃತಮೂಲವನ್ನೂ ಪೂಜೆಮಾಡುವವರಿಗೆ ಅನುಕೂಲವಾಗಿರಲೆಂದು ಅಕಾರಾದಿಯ ಅನುಕ್ರಮದಲ್ಲಿ ಕೊಟ್ಟಿರುವ ಒಂದು ಪಟ್ಟಿಯೂ ಇದೆ. **(ಮೂರನೆಯ ಮುದ್ರಣ, ಪುಟ ಕ್ರೌನ್ 4+42)**

# ಭಕ್ತರ ಪ್ರೇಮವನ್ನು ಉಕ್ಕೇರಿಸುವ ಕೆಲವು ಸ್ತೋತ್ರಗಳು

1. **ಮುಕುಂದಮಾಲಾ :** ಕುಲಶೇಖರಾಚಾರ್ಯರಿಂದ ವಿರಚಿತವಾದ ಈ ಭಕ್ತಿಪ್ರಧಾನಸ್ತೋತ್ರವು ವಿಷ್ಣುಭಕ್ತರಿಗೆಲ್ಲ ಪ್ರಿಯವಾಗಿರುತ್ತದೆ. ಭಗವದ್ಭಕ್ತಿಯ ಮರ್ಮವನ್ನು ವಿವರಿಸುವ ಈ ಪದ್ಯಗಳು ಹಾಡಿ ನಲಿಯಲು ಯೋಗ್ಯವಾಗಿವೆ. ಮೂಲ, ಅರ್ಥ, ಪಾಠಾಂತರಗಳನ್ನೂ ಕೊಟ್ಟಿದೆ. **ಇದು ಈಗ ನಿಮ್ಮ ಕೈಯಲ್ಲಿದೆ. (ಆರನೆಯ ಮು. ಪುಟ ಕ್ರೌನ್ 4+24)**

2. **ಸ್ತುತಿಪುಷ್ಪಾಂಜಲಿ :** ಸ್ತ್ರೀಯರಿಗೆ, ಬಾಲಕರುಗಳಿಗೆ ಕಂಠಪಾಠಕ್ಕೆ ಯೋಗ್ಯವಾದ ಹಾಗೂ ಹಿಂದೂ ಸಂಸ್ಕೃತಿಯ ವೈಶಿಷ್ಟ್ಯವನ್ನು ತಿಳಿಸುವ ದೇವತಾಸ್ತೋತ್ರಗಳು, ಧಾರ್ಮಿಕ, ನೈತಿಕ ಉಪದೇಶಗಳುಳ್ಳ ಪದ್ಯಗಳು, ಗಾಯತ್ರೀರಾಮಾಯಣ, ವಿದುರನೀತಿ, ಭಗವತ್‌ಸ್ತೋತ್ರಗಳು, ಪ್ರಾರ್ಥನಾಮಂತ್ರಗಳು, ನಾಲ್ಕು ವೇದಗಳ ಶಾಂತಿಮಂತ್ರಗಳು ಇವುಗಳನ್ನು ಪ್ರತಿಪದಾರ್ಥಸಮೇತ ಕೊಡಲಾಗಿದೆ. ಈ ಗ್ರಂಥವು ಕೈಯಲ್ಲಿದ್ದರೆ ಭಾರತೀಯ ಸಂಸ್ಕೃತಿಯ ಪ್ರಪ್ರಥಮ ಪರಿಚಯವೇ ಕೈಯಲ್ಲಿದ್ದಂತೆ ಎಂದು ಭಾವಿಸಬಹುದು.

**(ಐದನೆಯ ಮುದ್ರಣ, ಪುಟ ಕ್ರೌನ್ 4+74)**

3. **ಶಿವಕವಚ :** ಭದ್ರಾಯುವೆಂಬ ರಾಜಕುಮಾರನಿಗೆ ಋಷಭಯೋಗೀಶ್ವರರೆಂಬ ಮಹಾತ್ಮರು ಉಪದೇಶಿಸಿದ ಸ್ತೋತ್ರವಿದು. ಸ್ಕಾಂದಪುರಾಣದ ಬ್ರಹ್ಮೋತ್ತರ ಖಂಡದಿಂದ ಆರಿಸಿದ ಈ ಸುಪ್ರಸಿದ್ಧ ಸ್ತೋತ್ರವನ್ನು ಮೂಲ, ಅರ್ಥ, ವಿವರಣೆಗಳ ಸಮೇತವಾಗಿ ಪ್ರಕಟಿಸಿದೆ.

**(ಐದನೆಯ ಮುದ್ರಣ, ಕ್ರೌನ್ ಪುಟ 4+56)**

4. **ಶಿವಾನಂದಲಹರೀ :** ಹೆಸರಿಗೆ ತಕ್ಕಂತೆ ಶಿವಭಕ್ತರ ಹೃದಯದಲ್ಲಿ ಆನಂದದ ಹೆದ್ದೆರೆಗಳನ್ನು ಎಬ್ಬಿಸುವ ಭಕ್ತಿಪರವಾದ ಸ್ತೋತ್ರವಿದು. ಮೂಲ, ಭಾವಾರ್ಥ ವಿವರಣೆಯೊಂದಿಗೆ ಪ್ರಕಟವಾಗಿದೆ. ಪರಮೇಶ್ವರನ ಮೂರ್ತಿದರ್ಶನ, ಪೂಜೆ, ಮಂತ್ರಜಪ, ಸ್ತುತಿ, ಕೀರ್ತನೆ, ಸೇವೆ, ಧ್ಯಾನ - ಮುಂತಾದ ಬಗೆಬಗೆಯ ವಿಧಾನಗಳಿಂದ ಭಕ್ತನು ಹೇಗೆ ಆ ಪರವಸ್ತುವನ್ನು ತನ್ನ ಹೃದಯದಲ್ಲಿಟ್ಟುಕೊಂಡು ಸತತವಾಗಿ ಆನಂದಪಡಬಹುದು ಎಂಬುದನ್ನು ಈ ಸ್ತೋತ್ರವು ತೋರಿಸಿ ಕೊಡುತ್ತದೆ. **(ಮೂರನೆಯ ಮುದ್ರಣ, ಪುಟ ಡೆಮ್ಮಿ 4+78)**

---

ಹೆಚ್ಚಿನ ವಿವರಗಳಿಗೆ ಬೆಲೆಪಟ್ಟಿಯನ್ನು ತರಿಸಿಕೊಳ್ಳಿ.



ಕೃಷ್ಣ ತ್ವದೀಯಪದಪಙ್ಕಜಪಞ್ಜರಾನ್ತ –
ಮದ್ಯೈವ ಮೇ ವಿಶತು ಮಾನಸರಾಜಹಂಸಃ ।
ಪ್ರಾಣಪ್ರಯಾಣಸಮಯೇ ಕಫವಾತಪಿತ್ತೈಃ
ಕಣ್ಠಾವರೋಧನವಿಧೌ ಸ್ಮರಣಂ ಕುತಸ್ತೇ ॥